ॐ

ನೊಳಂಬ ವೀರಶೈವ ಇತಿಹಾಸ ದರ್ಪಣ

ಮೊದಲನೆಯದಾಗಿ ನೊಳಂಬ ಅಂದರೇನು ?

ನೊಳ್+ಅಂಬ = ನೊಳಂಬ. ನೊಳ್ ಅಂದರೆ ನೊಸಲು ಹಣೆ ಎಂದರ್ಥ. ಅಂಚಿ ಅಥವಾ ಅಂಬಕ ಅಂದರೆ ಕಣ್ಣು. ಈಗ ನೊಸಲುಕಣ್ಣು ಎಂದಾಯ್ತು ಅಂದರೆ ಹಣೆಗಣ್ಣು, ಈ ಜಗತ್ತಿನಲ್ಲಿ ಹಣೆಗಣ್ಣುಳ್ಳವನು ಯಾರು? ಪಶುಪತಿ ಪರಮೇಶ್ವರನು. ಇವನ ಅಂಶೀಭೂತರೇ ನೊಳಂಬರು ಈ ನೊಳಂಬ ವಂಶದ ಆದಿಪುರುಷ ತ್ರಿಣಯನು. ಇವನು ಪಶುಪತಿಯ ಆರಾಧಕನು, ಪಾಶುಪತ ವ್ರತೀಯನು. ನೊಳಂಬರು ಅಂದರೆ ಯಾರು ಎಂಬುದು ತಿಳಿಯಿತಲ್ಲ. ಇನ್ನು ನೊಳಂಬ ವೀರಶೈವರು ಅಂದರೆ ಯಾರು ಎಂಬುದನ್ನು ತಿಳಿಯೋಣ.

ಪಾಶುಪತಯೋಗ ಲಕುಳೀಶ ಪರಂಪರೆಯ ಕಾಳಾಮುಖ ಗುರುಗಳ ಶಿಷ್ಯರು ನೊಳಂಬ ವೀರಶೈವರು. ಇದೇ ಗ್ರಂಥದಲ್ಲಿ ನೊಳಂಬರ ದೊರೆ, ನಳ್‌ಪ್ರಭು. ನಣಕ್ಕಸ ಎಂಬ ಶಬ್ದಗಳು ಬಂದಿವೆ. ಈಗ ನೋಡಿ ನಣ್+ಅಕ್ಕಸ ನಣಕ್ಕಸ. ಇಲ್ಲಿ ಅಕ್ಕಸ ಎಂಬುದು ತದ್ಭವ. ಅಕ್ಷ ಎಂದರೆ ತತ್ಸಮ. ಅಕ್ಷ ಎಂದರೆ ಕಣ್ಣು.

ಇದರರ್ಥವೂ ನೊಸಲುಗಣ್ಣು ಎಂದೇ ಆಗುತ್ತದೆ. ಮತ್ತೆ ಈ ನೊಳಂಬರನ್ನು ನೊಣಬರು ಎನ್ನುವರಲ್ಲ? ಏನಿದರರ್ಥ ಏನೆನ್ನುವಿರ? ನೋಡಿ ಈ ನೊಳಂಬ ಶಬ್ದವು ಕಾಲಾಂತರದಲ್ಲಿ ನೊಣಂಬ ಎಂದಾಯ್ತು, ಈ ಎರಡು ಶಬ್ದಗಳಿಗೊಂದೇ ಅರ್ಥ. ಮುಂದೆ ಮುಂದೆ ಹಳ್ಳಿಗಳ ಆಡು ಭಾಷೆಯಲ್ಲಿ ಸೊನ್ನೆಯುಲೋಪವಾಗಿ ನೊಣಬ ಎಂದಾಗಿದೆ, ಇದಕ್ಕೆ ಯಾರು ಸಂಕೋಚ

ಪಡಬೇಕಾದ್ದಿಲ್ಲ. ನೊಳಂಬ. ನೊಣಂಬ. ನೊಣಬ ಈಶಬ್ದಗಳಿಗೆ ಸುಮಾರು ಒಂದು ಸಾವಿರದ ಎಂಟುನೂರು ವರ್ಷಗಳ ಇತಿಹಾಸವಿದೆ. ಇವೆಲ್ಲ ಒಂದೇ ಅರ್ಥ ಕೊಡುತ್ತವೆ. ಹೀಗೆಂದು ಹೇಮಾವತಿ ಸ್ಥಂಬ ಶಾಸನದಲ್ಲಿ ಹೇಳಿದೆ. ಆಯಿತು, ಈ ನೊಳಂಬ ಎಂಬುದು ನೊಣಂಬ ಹೇಗಾಯ್ತೆಂದು ಕೇಳುವಿರಾ? ಳ.ಣ. ಎಂಬ ಅಕ್ಷರಗಳಿಗೆ ಒಂದೇ ಅರ್ಥ ಕೊಡುವ ಕನ್ನಡ ಶಬ್ದಗಳ ಹೋಲಿಕೆ ನೋಡಿ ನಿಮಗೆ ತಿಳಿಯುತ್ತದೆ. ಗಿಳಿ ಇದ್ದುದ್ದು ಗಿಣಿ ಆಯಿತು, ಹೀಗೆಯೇ ಕುಳಿ-ಕುಣಿ, ಗುಳಿ-ಗುಣಿ, ಗಳ-ಗಣ, ಕೊಳ-ಕೊಣ, ಚೇಳು-ಚೇಣು, ಗಾಳ-ಗಾಣ, ಇವುಗಳಂತೆಯೇ ನೊಳಂಬ ಎಂಬುದೂ ನೊಣಂಬ ಎಂದಾಯ್ತು, ಆದರೂ ಒಂದೇಅರ್ಥ ಇವರನ್ನು ನೊಳಂಬರು ಎನ್ನಲು ಕಾರಣ ಕೇಳುವಿರಾ? ಹಿಂದೆ ಕರ್ನಾಟಕವನ್ನು ಆಳಿದ ಅರಸರು ಗಂಗರು. ಪಾಂಡ್ಯರು ಕದಂಬರು, ವೈಡುಂಬರು ಇತ್ಯಾದಿ ಇವುಗಳೆಲ್ಲಾ ಅವರ ವಂಶದ ಹೆಸರುಗಳು. ಹಾಗೆಯೇ ನೊಳಂಬರು ಎಂಬುದೂ ಅವರ ವಂಶದ ಹೆಸರು ಅಂದರೆ ಶಿವನ ಹಣೆಗಣ್ಣಿನಿಂದ ಹುಟ್ಟಿದವನ ವಂಶಿಕರು ಎಂದರ್ಥ. ನಾನು ಈ ಹಿಂದೆ ಹೇಳಿದ ತ್ರಿಣಯನನೇ ಈ ವಂಶದ ಮೂಲ ಪುರುಷನು.

ಈತನು ನಿಷ್ಠಾವಂತ ಶೈವನಾಗಿದ್ದು ಪಶುಪತಿ ಆರಾಧಕನಾಗಿದ್ದನು. ಅಲ್ಲದೆ ಇತಿಹಾಸ ಪುರುಷನೆನಿಸಿಕೊಂಡನು. ಹೀಗೆಂದು ಆವನೀ ಶಾಸನದಲ್ಲಿ ಹೇಳಿದೆ.

ಈಗ ನಾವು ಇವರ ಪೂರ್ಣ ಇತಿಹಾಸವನ್ನು ತಿಳಿಯೋಣ.

ಪಲ್ಲವರು ಮತ್ತು ಕರ್ನಾಟಕ

ಮೂಲತಃ ಪಲ್ಲವರು ಕರ್ನಾಟಕದಲ್ಲೇ ಹುಟ್ಟಿ ಬೆಳೆದವರು. ಇವರು ಮೊದಲು ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿದ್ದು ಅನಂತರ ಮಲಾಪಹಾರದಿಂದ ಪಶ್ಚಿಮ ಸಾಗರದವರೆಗೆ ಅಧಿಪತಿಗಳಾಗಿದ್ದರು. (ತಾಳಗುಂದ ಶಾಸನ ಕ್ರಿ.ಶ. ೨ ನೇ ಶತಮಾನ) ಬಹು ಕಾಲಾನಂತರ ಕದಂಬರ ಮಯೂರ

ಶರ್ಮನಿಗೆ ಈ ಭಾಗಗಳನ್ನು ಬಿಟ್ಟುಕೊಟ್ಟು ಈಗಿನ ತಮಿಳುನಾಡಿನಲ್ಲಿರುವ ಕಾಂಚೀ ಘಟಿಕಾ ಸ್ಥಾನವನ್ನು ಆಕ್ರಮಿಸಿಕೊಂಡು ಪೂರ್ವ ಮತ್ತು ಉತ್ತರದ ಕಡೆ ಅಂದರೆ ಶ್ರೀಶೈಲದ ಸುತ್ತ-ಮುತ್ತಣ ಈಗಿನ ಆಂಧ್ರಪ್ರದೇಶ ಅಲ್ಲಿನ ವರೆವಿಗೂ ಹರಡಿದರು. ಇವರ ರಾಜಧಾನಿ ಕಾಂಚೀನಗರ, ಇದಕ್ಕೆ ಪಲ್ಲವ ಪುರಿಯೆಂದು ಹೆಸರಿತ್ತು. ಇವರು ಸಂಸ್ಕೃತ ಶಾಸನಗಳ ಪಲ್ಲವರು. ಇವರ ಮೊದಲ ದೊರೆ ಸಿಂಹವರ್ಮ, ೨ನೇ ಶಿವಸ್ಕಂದವರ್ಮ. ೩ನೇ ವೀರವರ್ಮ ಕ್ರಿ ಶ 450 ರಲ್ಲಿ ಈ ದೊರೆಗಳು ಬಾದಾಮಿಯನ್ನು ತಮ್ಮ ವಶದಲ್ಲಿಟ್ಟು ಕೊಂಡಿದ್ದರು. ಬಹಳ ಕಾಲಾನಂತರ ಮುಂದೆ ಪಲ್ಲವ ಮಹೇಂದ್ರವರ್ಮ, ಪರಮೇಶ್ವರವರ್ಮ ಇವರು ಚಾಳುಕ್ಯರ ವಿನಯಾದಿತ್ಯನ ಕೂಡ ಯುದ್ಧ ಮಾಡಿ ಗೆದ್ದರು. ಇನ್ನು ಕಾಲಾನಂತರ ಚಾಳುಕ್ಯ ದೊರೆ ಕೀರ್ತಿವರ್ಮನು ಪಲ್ಲವ ದೊರೆ ಮುಮ್ಮಡಿ ನಂದಿವರ್ಮನ ಜೊತೆ ಯುದ್ಧ ಮಾಡಿ ಸೋಲಿಸಿ ಅವರ ಸಾರ್ವಭೌಮ ಎಂಬ ಬಿರುದನ್ನು ತಾನು ಧರಿಸಿದನು. ಇನ್ನು ಮುಂದೆ ತಲಕಾಡಿನ ಗಂಗರಿಗೆ ನಂದಿವರ್ಮನು ನೆರವಿತ್ತನೆಂದು ಮಾರಸಿಂಹನ ಆಲೂರು ಶಾಸನದಲ್ಲಿ ತಿಳಿಸುತ್ತದೆ. (ಈ ಕಾಲ ಕ್ರಿ. ಶ. 850) ಇನ್ನು ಪಲ್ಲವರು ವಿದೇಶಿ ಮೂಲದವರೆಂದು ಕೆಲವರ ವಾದ. ಇದು ಶುದ್ಧ ಸುಳ್ಳು, ಇವರಿಗೆ ಈಗಲೂ ಕೂಡ ವಿದೇಶಿ ಸಂಸ್ಕೃತಿ ಭಾಷೆಗಳ ಗಂಧವೇ ತಿಳಿಯದು. ಇವರು ನಮ್ಮ ಪವಿತ್ರ ಭಾರತದ ಅಮೃತವಾಣಿ ಸಂಸ್ಕೃತ ಮತ್ತು ಕನ್ನಡ ಭಾಷೆ ಗಳಲ್ಲಿಯೇ ವ್ಯವಹರಿಸುತ್ತಿದ್ದರು.

ಬಹುಶಃ ಹಾಗೇನಾದರೂ ಇದ್ದಲ್ಲಿ ನಮ್ಮ ಬೃಹತ್ ಭಾರತದ ಉತ್ತರ ದಲ್ಲಿರುವ ಕಾಶ್ಮೀರ ಮತ್ತು ಜಗತ್ತಿಗೇ ಹಿಂದೂ ರಾಷ್ಟ್ರವೆನಿಸಿಕೊಂಡಿರುವ ನೇಪಾಳಗಳಿಂದ ಬಂದಿದ್ದರೂ ಇರಬಹುದು. ಏತಕ್ಕೆಂದರೆ ನೇಪಾಳದಲ್ಲಿರ-ತಕ್ಕಂಥ ಪಶುಪತಿನಾಥನ ದೇವಸ್ಥಾನ ಜಗತ್ತಿಗೇ ಪ್ರಸಿದ್ಧಿಯಾಗಿದೆ. ಹಿಂದೆ ಪಾಶುಪತವ್ರತೀಯರಾದ ಶೈವರು ಆ ದೇಶದಾದ್ಯಂತ ಹರಡಿದ್ದರು. ಇದರಂತೆಯೇ ಕಾಶ್ಮೀರದಲ್ಲಿಯೂ ಪಾಶುಪತವ್ರತೀಯ ಲಕುಳೀಶ ಕಾಳಾಮುಖ ಜಂಗಮರೇ ತುಂಬಿದ್ದರೆಂದೂ, ಭಗವಾನ್ ಬಸವೇಶ್ವರರು ಕಲ್ಯಾಣ ಮಂಟಪದಲ್ಲಿ ಪ್ರತಿನಿತ್ಯ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಾರ್ಚನೆ, ದಾಸೋಹ ನಡೆಸುತ್ತಿದ್ದರೆಂದೂ ಕಲ್ಯಾಣದಲ್ಲಿ ಜಂಗಮರು

ಕಡಿಮೆ ಇದ್ದದ್ದರಿಂದ ಕಾಶ್ಮೀರದಿಂದ ಜಂಗಮರನ್ನು ಕರೆತಂದರೆಂದೂ ಪ್ರಸಿದ್ಧಿಯಾಗಿದೆ. ಆದ್ದರಿಂದ ಪಲ್ಲವರ ಮತ್ತು ನೊಳಂಬರ ಎಲ್ಲಾ ಶಾಸನ ಗಳೂ ಕರ್ಣಾಟಕದಲ್ಲೇ ಹುಟ್ಟಿ ಬೆಳೆದು ರಾಜ್ಯಭಾರ ಮಾಡಿದರೆಂದು ತಿಳಿಸುತ್ತವೆ. ಈ ಮೂಲ ಪಲ್ಲವರು ಕದಂಬ ಮಯೂರ ಶರ್ಮನಿಂದ ಸೋತು ಈಗಿನ ತಮಿಳುನಾಡಿಗೆ ಸೇರಿದ ಕಾಂಚೀಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಶ್ರೀ ಶೈಲದ ಸುತ್ತ-ಮುತ್ತಲವರೆಗೂ ಆಳಿದರು ಎಂದೆನು ತಾನೆ ಆಗ ಪಲ್ಲವರ ತ್ರಿಲೋಚನ ಅಥವಾ ಲಲಾಂಟನಯನನ, ಒಂದು ಕಿರು ಶಾಖೆ ಕನ್ನಡ ನಾಡಿನಲ್ಲೇ ಉಳಿದು ಮುಂದೆ ರಾಜ್ಯಭಾರ ಮಾಡಿದರು. ಖಟ್ವಾಂಗ ಧ್ವಜರಾದ ಇವರ ಲಾಂಛನ ನಂದಿ. ಇವರ ಆಳ್ವಿಕೆ ಪ್ರಾರಂಭ ವಾದದ್ದು ಕ್ರಿ.ಶ. 745 ರಲ್ಲಿ ಇಂದಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ.

ಹಿಂದಿನ ಮೈಸೂರು ರಾಜ್ಯದ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳನ್ನು ಒಳಗೊಂಡು ನೊಳಂಬರಿಗೆ ೧ ಸಾವಿರದ ಮೇಲೆ ಆಳುತ್ತಿದ್ದು ಕಾಲ ಕ್ರಮೇಣ ಹೆಚ್ಚು ಭೂಭಾಗವನ್ನು ವಶಪಡಿಸಿಕೊಂಡರು. ಹೀಗಾಗಿ ಅನಂತಪುರ, ತುಮಕೂರು ಜಿಲ್ಲೆಗಳ ಜೊತೆಗೆ ಬೆಂಗಳೂರು, ಕೋಲಾರ ಚಿತ್ರದುರ್ಗ, ಕಡೂರು, ಶಿವಮೊಗ್ಗ, ಧಾರವಾಡ, ಬಳ್ಳಾರಿ, ಮಂಡ್ಯ ಜಿಲ್ಲೆಯ ತಾಯಲೂರು, ಮದ್ರಾಸ್ ಆದಿಪತ್ಯದ ಸೇಲಂ ಜಿಲ್ಲೆಯ ಧರ್ಮಪುರಿವರೆವಿಗೂ ವಿಸ್ತರಿಸಿ, ನೊಳಂಬರಿಗೆ ಮುವತ್ತೆರಡು ಸಾವಿರ ವಾಯ್ತು ಹೆಂಜೇರು ಎಂದರೆ ಹೇಮಾವತಿ ಇವರ ರಾಜಧಾನಿ. ಈಗ ಮಡಕ ಶಿರಾ ತಾ॥ ನಲ್ಲಿದೆ. ಹೇಮಾವತಿ ಸ್ತಂಭ ಶಾಸನದಲ್ಲಿ ಇವರ ವಂಶ ವೃಕ್ಷವಿದೆ.

ಕ್ರಿ.ಶ. ಏಳು ನೂರರಲ್ಲಿಯೇ ಇವರ ವಂಶ ತ್ರಿಣಯನನಿಂದ ಪ್ರಾರಂಭ ವಾಯ್ತೆಂದು ಆ ಶಿಲಾ ಶಾಸನದಲ್ಲಿ ಹೇಳಿದೆ. ನೊಳಂಬ ರಾಜ ಮಾಂಗಳನು ಇವರ ಮೊದಲನೆ ದೊರೆಯೆಂದು ಹೇಳಿದೆ.

ತಲಕಾಡಿನ ಗಂಗರಾಜ ಶಿವಮಾರನಿಗೆ ಈ ನೊಳಂಬ ವಂಶದ ಸಿಂಹವರ್ಮನೆಂಬುವನು ಸಹಾಯ ಮಾಡಿದನು. ಆದ್ದರಿಂದ ಇವನಿಗೆ ಗಂಗ ಸಾಸಿರವನ್ನು ಸಹಾಯದ ಸವಿನೆನಪಿಗಾಗಿ ಬಿಟ್ಟುಕೊಟ್ಟನು,

ಅಲ್ಲದೆ ಗಂಗರಾಜ ಸತ್ಯವಾಕ್ಯನು ಸಿಂಹವರ್ಮನ ಮೊಮ್ಮಗಳನ್ನು ಮದುವೆಯಾದನು ತನ್ನ ಮಗಳೂ ನೀತಿಮಾರ್ಗನ ತಂಗಿಯೂ ಆದ ಜಯಬ್ಬೆಯನ್ನು (ಜಯಮ್ಮ) ನೊಳಂಬಾಧಿರಾಜ ಪೊಳಾಳನಿಗೆ ಮದುವೆ ಮಾಡಿಕೊಟ್ಟನು. ಆಗ ನೀತಿ ಮಾರ್ಗನು ತನ್ನ ಭಾವನೊಳಂಬಾಧಿರಾಜಗೆ ಗಂಗರು ಆರು ಸಾವಿರವನ್ನು ಬಳುವಳಿಯಾಗಿ ಬಿಟ್ಟುಕೊಟ್ಟನು. ಈ ಗಂಗರಾಜ ಕುಮಾರಿ, ಜಯಬ್ಬೆಯ ಮಗನೇ ಮಹೇಂದ್ರನು ತನ್ನ ತಂದೆಯರಾಜ್ಯ ಆರು ಸಾವಿರಕ್ಕೆ ಅಧಿಪತಿಯಾಗಿ ಆಳುತ್ತಿದ್ದನು. E C X ಬೌರಿಂಗ್‌ಪೇಟ್ ಶಾಸನದಲ್ಲಿ ಹೀಗೆಂದು ಹೇಳಿದೆ. ಈ ಮಹೇಂದ್ರನಿಗೆ 897 ರಲ್ಲಿ ಆಳಿದ ನೊಳಂಬಾದಿರಾಜ ನೋಳಿಪಯ್ಯ ಎಂಬ ಸಹೋದರನಿದ್ದನು. ಈ ನೋಳಿಪಯ್ಯನಿಗೆ ಅಂಕಯ್ಯನೆಂಬ ಮಗನಿದ್ದನು. ಮಹೇಂದ್ರನು ಭಾರೀ ವಿಸ್ತರಣಾವಾದಿ, ಸರ್ವತಂತ್ರ ಸ್ವತಂತ್ರನಾಗುವ ಯತ್ನದಲ್ಲಿ ಇವನು ಸಾಧಿಸಿದ ಪ್ರಗತಿಯನ್ನು ಅನೇಕ ಶಾಸನಗಳು ಬಣ್ಣಿಸಿವೆ. ವಿರೂಪಾಕ್ಷಿಪುರಸ್ತಂಭ ಶಾಸನದಲ್ಲಿ ಮಹೇಂದ್ರನು 96 ಸಾವಿರದ ಸಾರ್ವಭೌಮನಾಗಿದ್ದನು.

ಬಾಣ ವಿದ್ಯಾಧರನ ಕಾಲದಲ್ಲಿ ಕ್ರಿ. ಶ. 861 – 895 ಮಹೇಂದ್ರನು ಪುಳಿಂದನಾಡು ಅಂದರೆ ಪುಂಗನೂರನ್ನು ಆಕ್ರಮಿಸಿ ಗೆದ್ದುಕೊಂಡನು. ಈ ಮಹೇಂದ್ರನು ಮಹಾ ವೀರನೂ ಅಲ್ಲದೆ ಸ್ವತಃ ದಂಡನಾಯಕನು. ಯುದ್ಧದಲ್ಲಿ ಶತೃಗಳ ಮೇಲೆ ಸ್ವತಃ ತಾನೇ ನುಗ್ಗಿ ಬಗ್ಗುಬಡಿದು ವಿಜಯವನ್ನು ಸಂಪಾದಿಸುತ್ತಿದ್ದನು. ಈತನನ್ನು ಹೇಮಾವತಿ ಶಾಸನದಲ್ಲಿ ಅನೇಕ ಶತ್ರುರಾಜರ ಕಿರೀಟಗಳು, ನವರತ್ನಗಳು ಕಾಂತಿಯಿಂದ ಅಲಂಕೃತವಾದ ಪಾದಾರವಿಂದನು ಎಂದು ಬಣ್ಣಿಸಿದೆ.

ಮಹೇಂದ್ರನು ಇಡೀನೊಳಂಬ ವಂಶದಲ್ಲೇ ಅತ್ಯಂತ ಪ್ರತಿಭಾವಂತನು ಪ್ರತಾಪಶಾಲಿಯಾಗಿ ಮೆರೆದಿದ್ದಾನೆ. ಈತನು ತನ್ನ ಅರಮನೆಯನ್ನೇ ಶಿವನಿಗೆ ಸಮರ್ಪಿಸಿ ನೊಳಂಬೇಶ್ವರ ಅಥವಾ ದೊಡ್ಡೇಶ್ವರ ಲಿಂಗವನ್ನು ಸ್ಥಾಪಿಸಿದನೆಂದು ಹೇಳಿದೆ. ಈತನು ವೀರಶೈವ ಧರ್ಮಾವಲಂಬಿಯಾದರೂ ಮತ್ತೆಲ್ಲಾ ಧರ್ಮಗಳ ಬಗ್ಗೆಯೂ ಗೌರವಾದರಗಳನ್ನಿಟ್ಟು ದಾನದತ್ತಿಗಳನ್ನು ನೀಡಿ

ಸರ್ವಧರ್ಮ ಸಮನ್ವಯ ಪ್ರಭು ಆದನೆಂದು ಧರ್ಮಪುರಿ ಶಾಸನವೂ ತಿಳಿಸುತ್ತದೆ.

ಮಹೇಂದ್ರನು ಬಾಣಕುಲ ವಿಧ್ವಂಸನೆಂಬ ಬಿರುದನ್ನು ಪಡೆದಿದ್ದನು ಇವನರಾಜ್ಯವು ಸೇಲಂಜಿಲ್ಲೆಯ ಧರ್ಮಪುರಿಯವರೆಗೂ ವಿಸ್ತರಿಸಿತ್ತು. ಇದಕ್ಕೆ ಸಮೀಪದಲ್ಲಿರುವ ಅದ್ಯೆಮಾಂ ಕೋಟೆಯು ಮಹೇಂದ್ರ ಮಂಗಳ ಹೆಸರು ಪಡೆದಿತ್ತು ಹೀಗೆಂದು ಹೊಯ್ಸಳರ ಶಾಸನಗಳು ತಿಳಿಸುತ್ತವೆ.

ನೊಳಂಬ ದೊರೆಗಳು ಪಲ್ಲವ ದೊರೆಗಳಂತೆಯೇ ಶಿವಾಲಯಗಳ ರಚನೆಯಲ್ಲಿ ಆಸಕ್ತಿವುಳ್ಳವರಾಗಿದ್ದರು. ನೋಡಿ ಇದಕ್ಕೆ ಸಾಕ್ಷಿ ಅನಂತಪುರ ಜಿಲ್ಲೆಯ ಕಂಬದೂರಿನ ಮಲ್ಲಿಕಾರ್ಜುನ ದೇವಾಲಯ. ಬೆಂಗಳೂರು ಹತ್ತಿರದ ನಂದಿಯಲ್ಲಿನ ಭೋಗ ನಂದೀಶ್ವರ ದೇವಾಲಯಗಳು ಈ ವಂಶದವರ ರಚನೆಯ ಶ್ರೇಷ್ಠ ಉದಾಹರಣೆಗಳು.

ಮಹೇಂದ್ರನು ಕದಂಬ ರಾಜಕುಮಾರಿ ದೇವಾಂಬಿಕೆಯನ್ನೂ, ಗಂಗ ರಾ ಜ ಕು ಮಾ ರಿ ಗೋವಂಬ್ಬೆಯನ್ನೂ ಮದುವೆಯಾಗಿದ್ದನು. ಈ ಗೋವಂಬ್ಬೆಯ ಮಗನೇ ನನ್ನಿಗ ಅಥವಾ ಅಯ್ಯಪ್ಪದೇವನು.

ಈ ನನ್ನಿಗನು ಗಂಗ ರಾಜಕುಮಾರಿಯನ್ನು ಮದುವೆಯಾಗಿದ್ದನು. ಈಕೆಗೆ ಅಣ್ಣಿಗನೆಂಬ ಮಗನಿದ್ದನು, ಈ ಅಣ್ಣಿಗ ತನ್ನ ತಂದೆಯ ಕೈಕೆಳಗೆ ಮಾಂಡಲೀಕನಾಗಿದ್ದನು. ತಂದೆಯ ಮರಣದ ನಂತರ ಆ ರಾಜ್ಯಕ್ಕೆ ಉತ್ತರಾಧಿಕಾರಿಯಾದನು. ಈ ಅಣ್ಣಿಗನನ್ನು ಅಣ್ಣಯ್ಯ ಮತ್ತು ವೀರ ನೊಳಂಬನೆಂದೂ ಕರೆಯುತ್ತಿದ್ದರು. ಈತನು ಅಜ್ಜ ಮಹೇಂದ್ರನು ಗಳಿಸಿದ್ದ ವಿಶಾಲ ರಾಜ್ಯವನ್ನು ಆಳಿದನು. ಅಣ್ಣಿಗನು ಚಾಲುಕ್ಯ ರಾಜಕುಮಾರಿಯನ್ನು ವರಿಸಿದ್ದನು. ಇವನಿಗೆ ನೊಳಂಬ ವಂಶಾಭರಣನಾದ ಇರುಳನು ಜನಿಸಿದನು. ಇವನು ಅಕಾಲಮೃತ್ಯುವಿಗೆ ಸಿಕ್ಕಿದನು. ಇವನ ತಮ್ಮನ ಮಗನೇ ದಿಲೀಪನು ಕ್ರಿ.ಶ. 943 ರಲ್ಲಿ ಪಟ್ಟಕ್ಕೆ ಬಂದನು. ಈ ದಿಲೀಪನು ವೈಡಂಬ ಮತ್ತು ಮಹಾವಳಿಗಳ ಮೇಲೆ ಅಧಿಕಾರ ನಡೆಸಿದನು.

ಆವಣೀಯ ಲಕುಳೀಶ ಕಾಳಾಮುಖ ಗುರು. ತ್ರಿಭುವನ ಕರ್ತಾರ ದೇವನೇ ಇವನ ಕುಲಗುರು. ಈ ಗುರುವನ್ನು ನಾಡಿನ ಜನರೆಲ್ಲಾ ಕಲಿಯುಗ ರುದ್ರನೆಂದು ತಿಳಿದು ಪೂಜಿಸುತ್ತಿದ್ದರು. ಈ ಗುರುಗಳು ಕ್ರಿ.ಶ. 961ವರೆಗೆ ಜೀವಿಸಿದ್ದನು. ಈ ದಿಲೀಪನ ರಾಜ್ಯಭಾರದ ಇಪ್ಪತ್ತನೇ ವರ್ಷದ ಒಂದು ಶಾಸನವು ಹೊಸಪೇಟೆ ತಾಲ್ಲೂಕಿನ ಬಾಣಸಹಳ್ಳಿಯ ಕೆರೆಯ ತೂಬಿನ ಮೇಲಿದ್ದು ಈ ಕೆರೆಯನ್ನು ಕೆಲವು ಸ್ಥಳೀಯ ಗಾವುಂಡರು ಅಂದರೆ ಗೌಡರು ದಿಲೀಪರಾಜನ ಕಾಲದಲ್ಲಿ ಕಟ್ಟಿಸಿದರೆಂದು ತಿಳಿಸುತ್ತದೆ. ಈ ದಿಲೀಪನ ನಂತರ ಅವನ ಮಗ ನನ್ನಿನೊಳಂಬನು ಆಳಿದನೆಂದು ಕರಪನಹಳ್ಳಿಯ ಶಿಲಾ ಶಾಸನದಲ್ಲಿ ಹೇಳಿದೆ.

ಅನಂತರ ಅವನ ಮೊಮ್ಮಗ ಪೊಳಾಳನೂ ಮರಿಮಗ ವೀರಮಹೇಂದ್ರ ನೊಳಂಬಾಧಿರಾಜನು ಆಳಿದರೆಂದು ಶಾಸನದಲ್ಲಿ ಹೇಳಿದೆ. ಕ್ರಿ. ಶ. 965 ರ ಕಂಬದೂರು ಶಾಸನದಲ್ಲಿ ಹೇಳಿರುವಂತೆ ಕಾಂಚೀವಲ್ಲಭ ಆಳುವ ದೊರೆಯ ಮೊಮ್ಮಗ ಎಂದಿದೆ. ಈ ವೀರ ಮಹೇಂದ್ರನು ಚೋಳ ರಾಜ್ಯದ ಉತ್ತರ ಭಾಗವಾದ ಕಾಂಚೀಪಟ್ಟಣದ ಸುತ್ತಲ ತೊಂಡೈಮಂಡಲವನ್ನು ಗೆದ್ದನೆಂದು ತಿಳಿಸಿವೆ. ಈತನೇ ಈ ವಂಶದ ಕೊನೆಯ ರಾಜನಾಗಿರಬಹುದೆಂದು ಊಹಿಸಿದ್ದಾರೆ.

ಆ ಕಾಲಕ್ಕೆ ಚೋಳರು ನೊಳಂಬ ರಾಜ್ಯದಲ್ಲಿ ಕಾಣಸಿಕೊಳ್ಳುತ್ತಾರೆ. ಯುದ್ಧ ಮಾಡಿ ನೊಳಂಬರನ್ನು ಸೋಲಿಸುತ್ತಾರೆ. ಇನ್ನು ಮುಂದೆ ನೊಳಂಬರು ತಮ್ಮ ನಿಷ್ಠೆಯನ್ನು ಕಲ್ಯಾಣದ ಚಾಲುಕ್ಯರಿಗೆ ವರ್ಗಾಯಿಸಿದ್ದು ಕಂಡು ಬಂದಿದೆ. ಈ ನೊಳಂಬ ದೊರೆಗಳು ಚಾಲುಕ್ಯರ ಕೈಕೆಳಗೆ ಬಳ್ಳಾರಿ ಜಿಲ್ಲೆಯ ಕಂಪ್ಲಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಕ್ರಿ.ಶ.974 ರಿಂದ 1057 ರವರೆಗೆ ನೊಳಂಬವಾಡಿ ಮೂವತ್ತೆರಡು ಸಾಸಿರವನ್ನು ಆಳಿದರು.

ಹೀಗೆ ಆಳಿದ ದೊರೆಗಳ ಹೆಸರುಗಳು ಈ ರೀತಿ ಇವೆ.

೧. ಜಗದೇಕಮಲ್ಲ ನೊಳಂಬ, ೨. ಉದಯಾದಿತ್ಯ ೩. ನೊಳಂಬ ಪಲ್ಲವ ಪೆರ್ಮಾನಡಿ, ೪. ನನ್ನಿನೊಳಂಬ ಇವರುಗಳು. ಇವರು ತಮ್ಮ ಚಾಲುಕ್ಯ ದೊರೆಗಳ ಬಿರುದನ್ನೇ ಧರಿಸಿದ್ದರು.

ಕ್ರಿ. ಶ. 1057 ರ ನಂತರ ನೊಳಂಬವಾಡಿ ಮೂವತ್ತೆರಡು ಸಾಸಿರವು ಚಾಳುಕ್ಯರ ನೇರ ಆಡಳಿತಕ್ಕೆ ಒಳಪಟ್ಟಿದ್ದು ನೊಳಂಬ ರಾಜರು ಚಾಳುಕ್ಯ ರಾಜರ ಮಾಂಡಲೀಕರಾಗಿ ಕಂಪ್ಲಿಯಲ್ಲಿಯೇ ಇದ್ದು ರಾಜ್ಯಭಾರ ಮಾಡುತ್ತಿದ್ದರು. ಮುಂದೆ ಪೂರ್ವದ ಚೋಳರು ಚಾಳುಕ್ಯರ ರಾಜ್ಯದ ಮೇಲೆ ದಂಡೆ ಯಾತ್ರೆ ಮಾಡಿ ಸೋಲಿಸಿದಾಗ ನೊಳಂಬರ ರಾಜಧಾನಿ ಕಂಪ್ಲಿಯೂ ಸೂರೆ ಯಾಯಿತು. ಮುಂದೆ ಚೋಳರು ಉತ್ತುಂಗಿಯ ಪಾಂಡ್ಯರನ್ನು ನೊಳಂಬ-ವಾಡಿ ರಾಜಧಾನಿ ಕಂಪ್ಲಿಗೆ ಮಾಂಡಲೀಕರನ್ನಾಗಿ ನೇಮಿಸಿದರು. ಒಟ್ಟಿನಲ್ಲಿ ಹನ್ನೊಂದನೆಯ ಶತಮಾನದ ಅಂತ್ಯಕ್ಕೆ ಈ ನೊಳಂಬವಂಶದ ರಾಜ್ಯಭಾರವು ಇತಿಹಾಸದಿಂದ ಮರೆಯಾಯಿತು ಮುಂದೆ ಕೆಲಕಾಲದ ನಂತರ ವೀರಶೈವ ಮತೋದ್ಧಾರಕ ಭಗವಾನ್ ಬಸವೇಶ್ವರರು ಜನಿಸಿದರು.

ಕರ್ನಾಟಕದ ಪರಂಪರೆ

ಮೂಲ ಲೇಖಕರು : ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು
ಅನುವಾದ : ಡಾ॥ ಸೂರ್ಯನಾಥಕಾಮತರು

ನಾವು ಇದುವರೆವಿಗೂ ನೊಳಂಬ ಪ್ರಭುಗಳ ಇತಿಹಾಸವನ್ನು ತಿಳಿದಿ-ದಾಯಿತು. ಇನ್ನು ಮುಂದೆ ಆ ನೊಳಂಬ ವಂಶದ ವೀರಶೈವರು ಗುರುಗಳು ಮತ್ತು ಜಂಗಮರ ವಿಚಾರ ತಿಳಿಯೋಣ.

ದಕ್ಷಿಣ ಭಾರತದಲ್ಲಿ ಪಲ್ಲವರ ರಾಜಧಾನಿ ಕಂಚಿಯ ಘಟಿಕಸ್ಥಾನಕ್ಕೆ ಸಮನಾದ ಅನೇಕ ಘಟಿಕಾಸ್ಥಾನಗಳು ಕರ್ನಾಟಕದಲ್ಲಿಯೂ ಇದ್ದವು. ಅವು-ಗಳಲ್ಲಿ ನೊಳಂಬರ ರಾಜಧಾನಿಯಾದ ಹೆಂಜೇರು ಪಟ್ಟಣವೂ ಆಕರ್ಷಕ

ವಿದ್ಯಾ ಕೇಂದ್ರ ಘಟಿಕಾಸ್ಥಾನವಾಗಿ ಪ್ರಸಿದ್ಧಿ ಪಡೆದಿತ್ತು, ಘಟಿಕಾಸ್ಥಾನ ಅಂದು ವಿಶ್ವವಿದ್ಯಾನಿಲಯ. ಈ ಹೆಂಜೇರು ರಾಜಧಾನಿ ಪಟ್ಟಣವು ಸುಮಾರು 8 – 10 ಮೈಲಿ ಸುತ್ತಳತೆಯಿತ್ತೆಂದು ಶಾಸನಗಳು ತಿಳಿಸುತ್ತವೆ.

ಹೆಂಜೇರು ಪಟ್ಟಣದ ಸುತ್ತಲೂ ಇದ್ದ ಹಳ್ಳಿಗಳು ಅಮರಾಪುರ, ನಿಡುಗಲ್ಲು, ಬಸವನಹಳ್ಳಿ, ಶಿಬಿರ, ಜಾಣಗೆರೆ, ನಿಡುಗಟ್ಟೆ, ನಿದ್ರಘಟ್ಟ, ಎಂಜಲಗೆರೆ, ತಡಕಲೂರು, ದ್ವಾರನಗುಂಟೆ ಇತ್ಯಾದಿ ಈ ಹಳ್ಳಿಗಳ ಹೊಲಗಳಲ್ಲಿ ಪ್ರಾಚೀನ ಅವಶೇಷಗಳು ಬೇಕಾದಷ್ಟು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಈ ನೊಳಂಬ ವಂಶದ ಮೊದಲನೇ ಮಂಗಳನನ್ನು, ಶಿರಾ ತಾಲ್ಲೂಕಿನಲ್ಲಿ ದೊರೆತಿರುವ ಒಂದು ಶಾಸನದಲ್ಲಿ ವಿದ್ಯಾ ಪ್ರೋತ್ಸಾಹದಾಯಕನೆಂದು ವರ್ಣಿಸಿದ್ದಾರೆ. ಹೀಗೆಯೇ ಈ ವಂಶದ ರಾಜರೆಲ್ಲರೂ ವಿದ್ಯಾಭಿವೃದ್ಧಿಗೆ ಮಹತ್ವ ಕೊಟ್ಟು ನೊಳಂಬೇಶ್ವರ ವಿಶ್ವವಿದ್ಯಾಲಯವನ್ನು ಪೋಷಿಸಿಕೊಂಡು ಬಂದಿದ್ದಾರೆ, ಹೀಗೆಂದು ಎಫಿಗ್ರಾಫಿಕಾ ಕರ್ನಾಟಕದಲ್ಲಿ ಹೇಳಿದೆ.

ಘಟಿಕಾಸ್ಥಾನವು ನೊಳಂಬೇಶ್ವರದೇವಾಲಯದಲ್ಲಿ ಸ್ಥಾಪನೆಯಾಗಿತ್ತು, ಅನಂತ ಶಿವದೇಶಿಕರು ಎಂಬ ಗುರುಗಳು ಇದರ ಪ್ರಾಚಾರ್ಯರಾಗಿದ್ದರು. ಸೀತಾದೇವಿ ಎಂಬರಾಣಿಯು ಈಬೃಹತ್ ಘಟಿಕಾಸ್ಥಾನದ ಪುರೋಭಿವೃದ್ಧಿಗೆ ದಾನದತ್ತಿಯನ್ನು ಇತ್ತಳು ಎಂದು ಶಾಸನದಲ್ಲಿ ಹೇಳಿದೆ. ಈ ದೇವಾಲಯದ ಘಟಿಕಾಸ್ಥಾನಗಳಿಗೂ, ಧಾರ್ಮಿಕ ಮಠಗಳಿಗೂ ಅನ್ಯೋನ್ಯ ಸಂಬಂಧವಿತ್ತು, ಧಾರ್ಮಿಕ ಮಠಗಳ ಗುರುಗಳು ಅಂದರೆ ಸ್ವಾಮಿಗಳು ಈ ಘಟಿಕಾಸ್ಥಾನಗಳ ಪ್ರಾಚಾರ್ಯರಾಗಿರುತ್ತಿದ್ದರು. ಅವರಲ್ಲೂ ಲಕುಳೀಶ ಪರಂಪರೆಯ ಕಾಳಾಮುಖ ಗುರುಗಳೇ ಪ್ರಾಚಾರ್ಯರಾಗಿದ್ದುದು ಕೆಲವು ಶಾಸನಗಳಿಂದ ತಿಳಿದು ಬಂದಿವೆ. ಇದಕ್ಕೆ ನಿದರ್ಶನ ನೋಡಿ.

ಹೆಂಜೇರು ಪಟ್ಟಣದ ಮಹಾ ಘಟಿಕಾಸ್ಥಾನ ನೊಳಂಬೇಶ್ವರ ದೇವಾಲಯದಲ್ಲಿಯ ಶಾಸನದಲ್ಲಿ "ಶಿಷ್ಯಜಾತಕವರ್ಷಕಳಾಮುಖರ್" ಎಂದು ಹೇಳಿದೆ. ಇಂತಹ ಹೇಳಿಕೆಗಳು ಅನೇಕ ಶಾಸನಗಳಲ್ಲಿ ಬಂದಿರುವುದರಿಂದ ಕಾಳಾಮುಖ ಗುರು ಪರಂಪರೆಯವರು ಘಟಿಕಾಸ್ಥಾನಗಳಲ್ಲಿ ಪ್ರಾಚಾರ್ಯ

ರಾಗಿದ್ದರು ಎಂದು ತಿಳಿಯಬಹುದಾಗಿದೆ. ಇದೂಅಲ್ಲದೆ ಬರಗೂರಿನಲ್ಲೊಂದು ಶಿಕ್ಷಣ ಸಂಸ್ಥೆಯಿದ್ದು ಅಲ್ಲಿ ಬ್ರಹ್ಮಚಾರಿಗಳಾದವರಿಗೆ ಮತ್ತು ಗುರು ವಿರಕ್ತ ರಾಗುವವರಿಗೆ ಮಾತ್ರ ವಿದ್ಯೆ ಕಲಿಸುತ್ತಿದ್ದರು. ಅಲ್ಲಿನ ಆಚಾರ್ಯರೂ ಕೂಡ ಬ್ರಹ್ಮಚಾರಿಗಳಾಗಿಯೇ ಇರಬೇಕೆಂದು ನಿಯಮವಿತ್ತು.

ಇವರ್ಯಾರೆಂದರೆ ಸೋಮಭಟ್ಟಾರಕ, ವಿಮಳಮತಿಭಟ್ಟಾರಕ, ವರುಣ ಶಿವಭಟ್ಟಾರಕರು, ಇವರಿಗೆಲ್ಲಾ ಮುಖ್ಯಸ್ಥ ಪ್ರಾಚಾರ್ಯರು ಲಕುಳೀಶ ಪರಂಪರೆಯ ಕಾಳಾಮುಖ ಗುರು ಅನನ್ತ ಶಿವದೇಶಿಕರು. ಹೀಗೆಂದು ಸುವರ್ಣ ಸಂಪುಟ ನಲವತ್ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನ 1963 ಹೇಳಿದೆ ಆದ್ದರಿಂದ ನೊಳಂಬ ವೀರಶೈವ ಮಠಾಧೀಶ ಗುರುಗಳೆಲ್ಲಾ ತಮ್ಮ ಹೆಸರಿನ ಮುಂದೆ ದೇಶಿಕರು, ದೇಶಿಕೇಂದ್ರರು ಎಂದು ಸಂಪ್ರದಾಯವಾದು- ದನ್ನೇ ಸೇರಿಸಿಕೊಳ್ಳುತ್ತಾರೆ. ಈ ಗುರುಗಳನ್ನು ಎಲ್ಲಾ ಶಾಸನಗಳಲ್ಲೂ ಲಾಕುಳಸಮಯಸ್ತಂಬರೆಂದೂ ಲಾಕುಳಾಗಮನ ಪಂಡಿತರೆಂದೂ ವರ್ಣಿಸಿದೆ. ಇವರೆಲ್ಲರೂ ಮಠಾಧಿಪತಿಗಳಾಗಿದ್ದು ದೇವಾಲಯಗಳ ಆಡಳಿತವನ್ನು ನೋಡಿ ಕೊಳ್ಳುತ್ತಿದ್ದರು. ಇವರೆಲ್ಲಾ ಘನ ವಿದ್ವಾಂಸರು, ತಪಸ್ವಿಗಳು. ಈ ಕಾಳಾ ಮುಖರ ಪ್ರಬಲ ಕೇಂದ್ರಗಳೆಂದರೆ ಬನವಾಸಿ, ನೊಳಂಬವಾಡಿಯ ಹೆಂಜೇರು ಆವನಿ, ನಂದಿ, ಧರ್ಮಪುರಿ ಇವು ಬಹಳ ಹೆಸರುವಾಸಿಯಾದವುಗಳು. ಅಲ್ಲದೆ ಹಳೆಯಬೀಡಿನಲ್ಲಿ ಒಂದು ಪ್ರಸಿದ್ಧ ಕಾಳಾಮುಖಿಗುರುಗಳ ಮಠವಿತ್ತು.

ಕ್ರಿ. ಶ. 1133 ರಲ್ಲಿ ಮಹಾಗುರು ಲಕುಳೀಶವೇ ಚಿಲ್ಲುಕನಾಗಿ ಅವತ- ರಿಸಿದ ಮಠವಿದು ಎಂದು ಪ್ರತೀತಿ. ಇದು ಈಗ ಆ ಮಹಾ ಗುರು ಹೆಸರಿ- ನಲ್ಲಿಯೇ ಚಿಲುಕೂರು ಪುಷ್ಪಗಿರಿ ಸಂಸ್ಥಾನವಾಗಿ ಬೇಲೂರು ತಾಲ್ಲೂಕಿನಲ್ಲಿ ಪ್ರಸಿದ್ಧಿ ಹೊಂದಿದೆ. ಅಲ್ಲದೆ ಅದೇ ಕಾಲಕ್ಕೆ ಸೇರಿದ ಎಲಗುಂದ ಗುಂಡ್ಲು ಶೆಟ್ಟಿಹಳ್ಳಿ ಮಠವೂ ಇವೆ. ಇನ್ನು ಪಾಶುಪತ ಮತ್ತು ವ್ರತವು ಶ್ರೀ ರುದ್ರ ನಿಂದಲೇ ಉಪದೇಶಿಸಲ್ಪಟ್ಟಿದ್ದೆಂದು ಮಹಾಭಾರತದ ಶಾಂತಿಪರ್ವ 184ರಲ್ಲಿ ಹೇಳಿದೆ. ಪಶುಪತಿಯ ಸಂಬಂಧವಾದದ್ದು ಪಾಶುಪತ ವ್ರತವು. ಪಶುಪತಿ ಅಂದರೆ ಮಾನವಾದಿ ಇರುವೆ ಅಂತ್ಯದಾಗಿ ಇರತಕ್ಕಂತ ಪಶುಪಕ್ಷಿ ಮೃಗ ಕೀಟಾದಿ 84 ಲಕ್ಷ ಜೀವರಾಶಿಗಳಿಗೂ ಒಡೆಯ ಎಂದರ್ಥ.

ಇಂತಹ ಪಾಶುಪತ ವ್ರತವನ್ನು ಹೊಂದಿದ್ದ ಲಕುಳೀಶ ಗುರುವಿನಿಂದ ಸ್ಥಾಪಿತವಾದದ್ದೆ ಲಾಕುಳೀಶೈವವು. ಈ ಲಕುಳೀಶ ಗುರುವಿನ ವಿಚಾರ ಲಿಂಗ ಪುರಾಣದ ಸೂತಸಂಹಿತೆ 5-27 ರಲ್ಲಿ ಬಂದಿದೆ.

ಲಕುಳೀಶನು 28 ಯೋಗಾಚಾರ್ಯರಲ್ಲಿ ಒಬ್ಬನು. ಈ ಲಾಕುಳೀಶ ಶೈವವು ಬಹು ಪುರಾಣವಾದದ್ದು. ಅದು ತನ್ನದೇ ಆದ ತತ್ವಸಿದ್ಧಾಂತ ಗಳನ್ನು ಹೊಂದಿದೆ. ಈ ಲಾಕುಳೀಶ ಶೈವ ಮತೋದ್ಧಾರ ಮಾಡಲು ಸಾಕ್ಷಾತ್ ಶ್ರೀ ಗುರು ಸಿದ್ಧರಾಮೇಶ್ವರ ಈ ಭೂಲೋಕದ ಸೊನ್ನಲಿಗೆಯಲ್ಲಿ ಜನಿಸಿ ಶ್ರೀ ರೇವಣಸಿದ್ಧೇಶ್ವರರಿಂದ ವೀರಶೈವ ದೀಕ್ಷೆ ಪಡೆದು ವೀರಶೈವ ಮತೋದ್ಧಾರ ಮಾಡಿದರು.

ಪಾಶುಪತ ಪಂಥದ ಪ್ರಖ್ಯಾತಗುರು ಕಲಿಯುಗ ರುದ್ರನೆಂದು ಪ್ರಸಿದ್ಧಿ ಪಡೆದ ಅರ್ಚಕ ಬೊಂತೆಯ ದೇವನು ಲಕುಳೀಶನ ಮತ್ತೊಂದು ಅವತಾರ ವೆಂದು ಹೆಂಜೇರು ನೊಳಂಬೇಶ್ವರ ನಂದಿ ಸ್ತಂಬದ ಶಾಸನದಲ್ಲಿ ಹೇಳಿದೆ. ಶ್ರೀ ಕಲಿಯುಗ ರುದ್ರದೇವರು ನೊಳಂಬರ ದೊರೆ ದಿಲೀಪನ ಕಾಲದಲ್ಲಿ ನಲ್ವತ್ತು ವರ್ಷಗಳಕಾಲ ಅವನೀ ಸಂಸ್ಥಾನ ಮತ್ತು ಘಟಿಕಾಸ್ಥಾನಗಳನ್ನು ಆಳುತ್ತಿದ್ದು ಐವತ್ತು ದೇವಾಲಯಗಳು ಎರಡು ದೊಡ್ಡಕೆರೆಗಳನ್ನು ಕಟ್ಟಿಸಿ, ಕ್ರಿ.ಶ. 951 ರಲ್ಲಿ ಲಿಂಗೈಕ್ಯರಾಗಿ ರುದ್ರಲೋಕ ಪ್ರಾಪ್ತಿಯನ್ನು ಹೊಂದಿದ ರೆಂದು ಅವನೀ ಶಾಸನದಲ್ಲಿ ಹೇಳಿದೆ. ಆದ್ದರಿಂದಲೇ ಈ ಅವನೀ ಸಂಸ್ಥಾನವು ತಪೋ ರಾಜ್ಯವೆಂದು ಪ್ರಸಿದ್ಧಿ ಹೊಂದಿತ್ತು.

ದಿಲೀಪರಾಜನು ಈ ಮಹಾಗುರುವಿನ ಮಾರ್ಗದರ್ಶನ ಪಡೆಯಲು ಅವನಿಯ ಸುತ್ತ – ಮುತ್ತ ಕೆಲವು ಗ್ರಾಮಗಳನ್ನು ಒಟ್ಟುಗೂಡಿಸಿ ಚಿಕ್ಕ ಸಂಸ್ಥಾನವನ್ನಾಗಿ ಮಾಡಿ ಶ್ರೀ ಗುರುವಿನ ಆಳ್ವಿಕೆಗೆ ಬಿಟ್ಟುಕೊಟ್ಟಿದ್ದನು. ಮತ್ತೊಬ್ಬರು ಶ್ರೀ ಶಕ್ತಿದೇವರು ಕೋಡಿಮಠದ ಅಧಿಪತಿಗಳಾಗಿದ್ದರೆಂದು ತಿಳಿಸಿದೆ. ಈ ಸ್ವಾಮಿಗಳವರಿಗೆ ಒಂದು ಕಟ್ಟುಪಾಡಿನ ನಿಯಮ ಇತ್ತೆಂದು ಶಿಕಾರಿಪುರದ 277 ನೇ ಶಾಸನದಲ್ಲಿ ಹೀಗೆ ಹೇಳಿದೆ " ಬ್ರಹ್ಮಚರ್ಯವಿಲ್ಲ- ದೊಡಂದೀ ಮಠದಿಂ ಪೊರ ಮಾಡಿಸುವುದು. ಈ ಮಠ ಅರಸೀಕೆರೆಯ-

ನೊಳಂಬೇಶ್ವರ ಮಠದ ಸಂತತಿಯ ಮಠ" ಎಂದಿದೆ. ಇಂತಹ ಓಸ್ನೆಲಿ ಯಂಳ್ಳ ಲಕುಳೀಶ ಪರಂಪರೆಯ ಕಾಳಾಮುಖ ಗುರುಗಳನ್ನು ಮಹೇಶ್ವರ ರೆಂದು ಕರೆಯುತ್ತಿದ್ದರು. ಇವರಿಗೆ ತಮ್ಮದೇ ಆದ ಲೋಕ ಪ್ರಸಿದ್ಧ ಶಿವ ತತ್ವಶಾಸ್ತ್ರಗಳಿದ್ದವು. ಆ ತತ್ವಗಳನ್ನು ಲಕುಳೀಶನು ಪಾಶುಪತ ಸೂತ್ರಗಳಲ್ಲಿ ಸಂಗ್ರಹಿಸಿದ್ದಾನೆ. ಇವುಗಳಿಗೆ ಕ್ರಿ. ಶ. ಮೂರರ ಅಂತ್ಯ ನಾಲ್ಕರ ಆದಿಗೆ ಸೇರಿದವನಾದ ಕೌಂಡಿನ್ಯನು ರಚಿಸಿದ ವಾಖ್ಯಾನವಿದೆ. ಇದರ ವಿಚಾರವಾಗಿ ತಿಳಿಸುವ ಮತ್ತೊಂದು ಗ್ರಂಥ "ಗುಣಾಕಾರಿಕಾ" ಈ ಗ್ರಂಥಕ್ಕೆ ಕ್ರಿ.ಶ. 925 ರಲ್ಲಿ ಭಾಸರ್ವಜ್ಞರೆಂಬುವರು ವಾಖ್ಯಾನ ಬರೆದಿದ್ದಾರೆ.

ಇದನ್ನು ಸಾಯಣ ಮಾಧವರು ಸರ್ವದರ್ಶನ ಸಂಗ್ರಹದಲ್ಲಿ ಈ ರೀತಿ ನಿರೂಪಿಸಿದ್ದಾರೆ ಈ ಪಾಶುಪತ ಪಂತ, ಆಸ್ತಿಕ ಮತ. ಈ ಮಠದ ತತ್ವಗಳು ದೇವರು ಇದ್ದಾನೆಂಬುದನ್ನು ದೃಢೀಕರಿಸುತ್ತವೆ. ಇಂತಹ ಪಾಶುಪತಿ ಯೋಗ ಚಿಹ್ನೆಗಳುಳ್ಳವರೇ ಲಿಂಗಾಂಗಿಗಳು.

ಕನ್ನಡ ಶಾಸನಗಳಲ್ಲಿ ಕಾಳಾಮುಖಿ ಗುರುಗಳ ಬಗ್ಗೆ ಷಡ್‌ದರ್ಶನ ಸಮುಚ್ಚಯ ಕರ್ತೃವಾದ ಹರಿಭದ್ರ ಸೂರಿಗಳೆಂಬ ಜೈನ ಗ್ರಂಥಕಾರರು ಲಾಕುಳ ಶೈವ ಕಾಳಾಮುಖಿ ಗುರುಗಳ ವಿಷಯವನ್ನು ಹೀಗೆ ಹೇಳುತ್ತಾರೆ. ಈ ಪಂಥದ ಗುರುಗಳು ಲಾಕುಳವೆಂಬ ದಂಡವನ್ನು ಹಿಡಿದಿರುತ್ತಾರೆ. ಅ ಬಾಲ ಬ್ರಹ್ಮಚಾರಿಗಳಾಗಿರುತ್ತಾರೆ. ಇವರು ಸಂಸ್ಕಾರದಿಂದ ಪರಿಪೂರಿತವಾದ ಚಿಕ್ಕಲಿಂಗವನ್ನು ತಮ್ಮ ತೋಳಿನಲ್ಲಾಗಲಿ, ಜಟೆಯಲ್ಲಾಗಲಿ ಧರಿಸಿರುತ್ತಾರೆ ಎಂದು ಹೇಳುತ್ತಾರೆ.

ಕರ್ನಾಟಕದಲ್ಲಿ ಈ ಲಕುಳೀಶ ಶೈವ ಮತವೇ ರೇವಣಸಿದ್ಧಾದಿಗಳಿಂದ ವೀರಶೈವ ಧರ್ಮಕ್ಕೆ ದಾರಿಮಾಡಿಕೊಟ್ಟಿತು. ಈ ಕಾಳಾಮುಖಿ ಗುರುಗಳು ಮುಂದೆ ತಮ್ಮ ಶಿಷ್ಯರ ದೀಕ್ಷೆ ಶಿಕ್ಷೆಗೆ ಒಡೆಯರಾಗಿ ಜಂಗಮರು ಗುರುಗಳು ಎಂದು ಕರೆಸಿಕೊಂಡರು. ಈ ಕಾಳಾಮುಖಿ ಗುರುಗಳೇ ನೊಳಂಬ ವೀರ-ಶೈವರ ಗುರುಗಳ ಮತ್ತು ಜಂಗಮರ ಪೂರ್ವಿಜರು. ಹೀಗೆಂದು ಕಪಟರಾಳ್ ಕೃಷ್ಣರಾವ್ ಹೇಳಿದ್ದಾರೆ.

ಹರಿಹರದೇವನು ತಾನು ರಚಿಸಿದ ರೇವಣಸಿದ್ಧರಗಳೆಯಲ್ಲಿ ರೇವಣಸಿದ್ಧರನ್ನು "ಲಾಕುಳದಮಾಮ್ಮ ಕಂಥೆಯು ಕಮನೀಯಂ ರೂಪಂ ವಜ್ರಕುಂಡಳ, ವಜ್ರದಲಾಕುಳ, ಲೋಕೈಕ ಬಂಧು ಇತ್ಯಾದಿ ವರ್ಣಿಸಿದ್ದಾನೆ.

ರೇವಣಸಿದ್ಧರ ಅನುಗ್ರಹದಿಂದ ಜನಿಸಿದ ಸಿದ್ಧರಾಮನನ್ನು ರಾಘವಾಂಕನು ಸಿದ್ಧರಾಮ ಪುರಾಣದಲ್ಲಿ" ಸ್ವತಃ ಈಶನೇ ಗುರುವಾಗಿಪ್ಪನು ಪೋಗೆನಲುಕುಂಡ ಸರ್ವಸಿದ್ಧಿಗೆ ತವರ್ಮನೆಯೆನಿಪ ಲಾಕುಳವನ್ನಿತ್ತು" ಎತ್ತಿ ಕೊಡೆಗೆ ತೆಗೆದು-ಅಗಜೇ ನೋಡು ಈಕುಮಾರನ ಭಕ್ತಿ, ಜ್ಞಾನ, ವೈರಾಗ್ಯ, ಸಾಟಿಯಾಯ್ತಲ್ಲವೇ ಅಭಯುವನ್ನಿತ್ತು" ಎಂದು ಹೇಳಿದ್ದಾನೆ.

ರೇವಣಸಿದ್ಧರು ಮತ್ತು ಸಿದ್ಧರಾಮನ ಸಂಬಂಧ ಮತ್ತು ಸಂಪರ್ಕದಲ್ಲಿ ರುದ್ರಮುನಿಶಿವಾಚಾರ್ಯರೂ ಹಾವಿನಹಾಳ ಕಲ್ಲಯ್ಯನವರೂ ಇದ್ದರು. ಇವರೆಲ್ಲರೂ ಲಕುಳೀಶ ಪರಂಪರಾಗತ ಕಾಳಾಮುಖ ಗುರುಗಳು ಆದ್ದರಿಂದ ನೊಳಂಬ ವೀರಶೈವರಿಗೆ ಸಿದ್ಧೇಶ್ವರ, ರುದ್ರೇಶ್ವರ, ಕಲ್ಲೇಶ್ವರ, ವೀರೇಶ್ವರ, ಭೈರೇಶ್ವರರೇ ಮನೆದೇವರುಗಳು ಈ ನೊಳಂಬ ವೀರಶೈವರೆಲ್ಲರೂ ನಂದಿ ಲಾಂಛನವುಳ್ಳವರಾಗಿದ್ದುದರಿಂದ ನಂದಿಧ್ವಜ, ಯಜ್ಞಾರೀಶ್ವರ, ವೀರಭದ್ರನ ಭಕ್ತರಾಗಿದ್ದರಿಂದ ವೀರೇಶನ ವಿಗ್ರಹವಿರುವ (ಹಲಗೆದೇವರು) ಮೆರೆಸುತ್ತಾರಲ್ಲದೆ, ಜಾತ್ರೆ ಇತ್ಯಾದಿ ಪೂಜಾ ವಿಶೇಷ ದಿನಗಳಲ್ಲಿ ಯಜ್ಞಾರೀಶ್ವರನ ಅಗ್ನಿ ಕುಂಡಾರ್ಚನೆ ಇತ್ಯಾದಿಗಳನ್ನು ಮಾಡುತ್ತಾರೆ.

ವಿಷ್ಣು ದೇವಾಲಯಗಳ ಮುಂದೆ ಗರುಡಗಂಬ ನಿಲ್ಲಿಸಿದ ರೀತಿ ಎಲ್ಲಾ ಶಿವಾಲಯಗಳ ಮುಂದೆ ನಂದಿ ಕಂಬ ನಿಲ್ಲಿಸುತ್ತಾರೆ. ಜಾತ್ರೆಯ ಮುಂಸ್ನಾದಿನ ಧ್ವಜಾರೋಹಣ ಅಂದರೆ ನಂದಿಯ ಗುರುತುಳ್ಳ ಬಾವುಟ ಕಟ್ಟಿದ ಝಂಡಾ ಕಂಬವನ್ನು ಸ್ಥಾಪಿಸಿ ಅರ್ಚಿಸುತ್ತಾರೆ. ಜಾತ್ರೆಯ ಸಮಸ್ತ ಕಾರ್ಯಗಳೂ ಮುಗಿಯುವರೆಗೂ ಪ್ರತಿಯೊಬ್ಬ ಶರಣ ಸದ್ಭಕ್ತರೂ ವ್ಯವಸಾಯ ಕೆಲಸಗಳನ್ನು ನಿಲ್ಲಿಸಿ ಶ್ರದ್ಧಾಭಕ್ತಿಗಳಿಂದ ದೇವರ ಸೇವೆ ಮಾಡಿ ಜಾತ್ರೆಯು ಸಾಂಗವಾಗಿ ನಡೆಯುವಂತೆ ಮಾಡುವುದೇ ಇದರ ತತ್ಪೋದ್ದೇಶವು.

ಈಗಲೂ ನಮ್ಮ ಹಳ್ಳಿಯ ಜನರು ತಮ್ಮ ಗ್ರಾಮ್ಯ ಭಾಷೆಯಲ್ಲಿ ಏನಯ್ಯಾ, ಹೀಗೆ ಜಾಂಡ್ಯಾ ಹೊಡೆದು ಕುಳಿತುಬಿಟ್ಟೆ, ಎಂದು ಜರೆದಾಡುವುದು

ರೂಢಿಯಲ್ಲಿದೆ. ತಾವು ಇದುವರೆವಿಗೂ ನೊಳಂಬ ವೀರಶೈವರು ಯಾರು? ಅವರ ಗುರುಗಳು ಮತ್ತು ಜಂಗಮರು ಮಠಗಳ ಮಹತ್ತು ಎಲ್ಲಾ ತಿಳಿದಾ-ಯ್ತಲ್ಲ. ಇನ್ನು ಮುಂದೆ ಚೋಳರು ಮೊಟ್ಟ ಮೊದಲು ಹೆಂಜೇರು ರಾಜಧಾನಿಯನ್ನು ವಶಪಡಿಸಿಕೊಂಡ ನಂತರ ಅಲ್ಲಿದ್ದ ನೊಳಂಬ ವೀರಶೈವ ರಲ್ಲಿ ಕೆಲವರು ಹೆಂಜೇರು ರಾಜಧಾನಿಯಿಂದ ತಮ್ಮ ಮನೆ ದೇವರಾದ ಯಜ್ಞೇಶ್ವರ ವೀರಭದ್ರ ಮತ್ತು ಭೈರೇಶ್ವರರ ವಿಗ್ರಹ ಸಮೇತ ಅಲ್ಲಿಂದ ಈಗಿನ ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಶೆಟ್ಟಿಕೆರೆಯ ಹತ್ತಿರ ಸಾಲಳ್ಳಿಯೆಂದು ಪ್ರಸಿದ್ಧಿ ಹೊಂದಿರುವ ಹನ್ನೆರಡು ಹಳ್ಳಿಗಳ ಮಧ್ಯೆ ಹೆಂಜೇರೆಯಲ್ಲಿದ್ದಂತೆಯೇ ಚಿಕ್ಕದಾಗಿ ದೇವಾಲಯ ನಿರ್ಮಿಸಿ ದೇವರುಗಳನ್ನು ಅಲ್ಲಿ ಪ್ರತಿಷ್ಠಾಪಿಸಿ ತಮ್ಮ ಮನೆ ದೇವರನ್ನಾಗಿ ಮಾಡಿಕೊಂಡು ಅರ್ಚಿಸುತ್ತಾ ಪ್ರತಿವರ್ಷವೂ ಜಾತ್ರೆ ನಡೆಸುತ್ತಿದ್ದಾರೆ.

ಈಗ ಈ ಸ್ವಾಮಿಯು ಹೆಂಜೇರು ಭೈರೇದೇವರು ಎಂದು ಪ್ರಸಿದ್ಧಿ ಹೊಂದಿದ್ದಾನೆ. ಹೀಗೆಯೇ ಕೆಲವು ಪುರಾತನ ಕಾಲದ ವೀರೇಶ, ಭೈರೇಶನ ದೇವಾಲಯ ಶೆಟ್ಟಿಕೆರೆಯಲ್ಲಿಯೂ ಇವೆ. ಈ ಊರಿನ ಪಟೇಲರು ನೊಳಂಬ ವೀರಶೈವರ ಮನೆತನದವರು. ಇವರನ್ನು ಪುರಾತನ ಕಾಲದಿಂದಲೂ ಯಜ-ಮಾನ್ ಎಂದು ಕರೆಯುತ್ತಾರೆ. ಈಮನೆತನದವರು ಭೈರೇಶ್ವರನ ಅರ್ಚಕರೂ ಆಗಿದ್ದು ಸ್ವಾಮಿಯ ಸೇವಾದಿಗಳಿಗೆ ಬರತಕ್ಕಂತ ಭಕ್ತರಿಗೆ ನೆರವಿತ್ತು ಆದರಿ ಸುತ್ತಾರೆ. ಈ ದೇವರುಗಳಿಗೆ ದಾನದತ್ತಿಗಳಿವೆ. ಈ ವಿಚಾರ ಸ್ಥಳ ಪುರಾಣ ದಲ್ಲಿ ಉಕ್ತವಾಗಿದೆ. ಕಂಪ್ಲಿಯು ಸೂರೆಯಾದ ಮೇಲೆ ಅಲ್ಲಿಂದ ಹೊರಟು ಸೊನ್ನಲಿಗೆಗೆ ಸೇರಿದ ನೊಳಂಬ ವಂಶದ ಓರ್ವಗೌಡರು ಮಹಾ ಶಿವಭಕ್ತರೂ ಸದ್ಗುಣಗಳೂ, ಗುರುಲಿಂಗ ಜಂಗಮಾರಾಧಕರೂ ಆಗಿದ್ದರು. ಆಗ ಶ್ರೀ ಜಗದ್ಗುರು ಶಿವಸಿದ್ಧರಾಮೇಶ್ವರರ ಉದಯವಾಗಿತ್ತು.

ಈ ಗೌಡರು ಆ ಮಹಾ ಗುರುವಿನ ಕೆಲಸ ಕಾರ್ಯದಲ್ಲಿ ಕಿಂಕರನಾಗಿ ಸೇವೆ ಸಲ್ಲಿಸುತ್ತಿದ್ದು ಮಹಾ ಗುರುವಿನ ಮನಮೆಚ್ಚಿಸಿ ನಾಗಮುರಿ ಎಂಬ ಖಡ್ಗವನ್ನು ಆಶೀರ್ವಾದದ ಮೂಲಕ ಪಡೆದು ಗುರು ಆದೇಶದಂತೆ ನಡೆ-ಯುತ್ತ ಆ ಖಡ್ಗವನ್ನು ಪೂಜಿಸುತ್ತಿದ್ದರು. ಆ ಗೌಡರು ಶ್ರೀ ಗುರುವಿನ ಅನುಗ್ರಹದಿಂದ ಸಾತ್ವಿಕರೂ,ಶಿವಭಕ್ತರೂ ,ಗುರುಲಿಂಗ ಜಂಗಮಾರಾಧಕರೂ

ಆಜಾನು ಬಾಹು ಭುಜಬಲ ಪರಾಕ್ರಮಿಗಳೂ ಆದ ಏಳು ಜನ ಗಂಡು ಮಕ್ಕಳಿದ್ದರು. ಇವರಲ್ಲಿ ಹಿರಿಯನು ವೀರಪ್ಪಗೌಡನು ಈ ಏಳು ಜನ ಸಹೋದರರೂ ತಮ್ಮ ತಂದೆಗೆ ಶ್ರೀ ಗುರುವಿನ ಆಶೀರ್ವಾದದಿಂದ ದೊರೆತಿದ್ದ ನಾಗಮುರಿ ಖಡ್ಗವನ್ನು ಪಡೆದುಕೊಂಡು ಹಿರಿಯರಿಂದ ಆಶೀರ್ವಾದ ಪಡೆದು ಸೋಳಂಬ ವೀರಶೈವರು ಹೆಚ್ಚಾಗಿ ಇದ್ದಂತ ತುಮಕೂರು ಜಿಲ್ಲೆಗೆ ಬಂದು ಸ್ಥಳ ಪರಿಶೀಲನೆ ಮಾಡಿ ಮಧುಗಿರಿ ಪಟ್ಟಣ ಮತ್ತು ಕೋಟೆಗಳನ್ನು ಕಟ್ಟಿಸಿ ರಾಜ್ಯವನ್ನು ಸ್ಥಾಪಿಸಿ ಆಳ್ವಿಕೆ ನಡೆಸಿದರು. ಅನೇಕ ಯುದ್ಧಗಳನ್ನು ದಿಟ್ಟತನದಿಂದ ಎದುರಿಸಿದರು.

ವೀರಪ್ಪಗೌಡರ ಮುಖಂಡತ್ವವನ್ನು ಒಪ್ಪಿಕೊಂಡು ತಮ್ಮಂದಿರು ಕೋರ ತೆರೆಯೂರು, ಚೇಳೂರು, ಗುಬ್ಬಿಹೊಸಳ್ಳಿ, ಎಣ್ಣೇಗೆರೆ, ಬಿದರೆ ಈ ಸ್ಥಳಗಳಲ್ಲಿ ಏಳು ನಾಡುಗಳನ್ನು ಕಟ್ಟಿ ಆಳ್ವಿಕೆ ನಡೆಸಿದರು. ಇವರಿಗೆಲ್ಲಾ ಚಿಕ್ಕಪ್ಪಗೌಡರೆಂದು ಹೆಸರಿತ್ತು. ಹಿರಿಯ ವೀರಪ್ಪಗೌಡರಿಗೆ ಮಹಾ ನಾಡು ಪ್ರಭುವೆಂದು ಹೆಸರಾಯ್ತು. ಈ ವೀರಪ್ಪಗೌಡರು ಮುಮ್ಮಡಿ ಎಂಬ ಪಟ್ಟಣವನ್ನು ಕಟ್ಟಿಸಿದರು.

ಗುಬ್ಬಿ ಹೊಸಳ್ಳಿ ಗೌಡರು ಗುಬ್ಬಿ ಪೇಟೆಯನ್ನು ಕಟ್ಟಿಸಿದರು. ಬಹಳ ವರ್ಷಗಳ ನಂತರ ವಿಜಯನಗರದ ಅರಸರಿಗೂ ಬಿಜಾಪುರದ ಸುಲ್ತಾನರಿಗೂ ಯುದ್ಧ ನಡೆದಾಗ ಈ ಮುಮ್ಮಡಿ ಪಟ್ಟಣವು ನಾಶವಾಯ್ತು. ಈಗಲೂ ಸಹ ಈಪಟ್ಟಣದ ಅವಶೇಷಗಳು ಪುರವರ, ಗೊಂದಿಹಳ್ಳಿ, ದೊಡ್ಡಹೊಸಳ್ಳಿ ಎಲ್ಲೆಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಈಗಲೂ ಎಣ್ಣೇಗೆರೆ ಕಟ್ಟೇಗೌಡರು ಇಮ್ಮಡಿ ಮುಮ್ಮಡಿಗಳೆಂದು ಪ್ರಸಿದ್ಧಿಯಾಗಿದ್ದಾರೆ.

ಈ 7 ಜನ ಗೌಡರ ಪೈಕಿ ಒಬ್ಬರ ಮೊಮ್ಮಗ ಇಮ್ಮಡಿ ಚಿಕ್ಕೇಗೌಡರ ಸಾಹಸವನ್ನು ವರ್ಣಿಸುವ ಮತ್ತೊಂದು ಪ್ರಸಂಗ ಹೀಗಿದೆ. ಒಮ್ಮೆ ಪೆನುಗೊಂಡೆಯ ವೆಂಕಟಪತಿರಾಯರ ಅಪ್ಪಣೆಯಿಲ್ಲದೆ ಕೋಟೆ-ಕೊತ್ತಳುಗಳನ್ನು ನಿರ್ಮಿಸಿದ್ದಕ್ಕಾಗಿ ಚಿಕ್ಕೇಗೌಡರು ವೆಂಕಟಪತಿರಾಯರ ಸೈನ್ಯವನ್ನು ಎದುರಿಸಬೇಕಾಯ್ತಂತೆ. ಆಗ ಗೌಡರು ಜಾಣ್ಮೆಯಿಂದ ವೆಂಕಟಪತಿರಾಯನ್ನೇ ಅವರ ಯುದ್ಧ ಭೂಮಿಯಿಂದ ಅಪಹರಿಸಿ ತನ್ನ ಶಿಬಿರಕ್ಕೆ ತಂದು ತಮ್ಮ ಧೈರ್ಯ,

ಸ್ಥೈರ್ಯ ನಿಷ್ಠೆಗಳನ್ನು ಪ್ರದರ್ಶಿಸಿದಾಗ ವೆಂಕಟರಾಯರು ಗೌಡರನ್ನು ಬಹುವಾಗಿ ಮೆಚ್ಚಿ-ಬಾಚಿ ತಬ್ಬಿಕೊಂಡು 'ರಾಜ' ಎಂಬ ಬಿರುದು ಮತ್ತು ಚಿನ್ನದ ನಂದಿಯನ್ನು ಕೊಟ್ಟು ಗೌರವಿಸಿದರಂತೆ ಹಂಪೆಯ ಸುತ್ತಮುತ್ತ ಹಳ್ಳಿಗಳಲ್ಲಿ ವಾಸವಾಗಿದ್ದಂತೆ, ಮತ್ತೆ ಕೆಲವರು ನೊಳಂಬ ವೀರಶೈವ ಸಹೋದರರು ವಿಜಯನಗರ ಪತನಾನಂತರ ಮುಸ್ಲೀಮರ ಹಾವಳಿಗೆ ಹೆದರಿ ತಮ್ಮ ಮನೆ ದೇವರುಗಳಾದ ಹಂಪೆಯ ವಿರೂಪಾಕ್ಷನಕಂಬಿ ನೊಳಂಬೇಶ್ವರ ಅಂದರೆ ಮಲ್ಲಿಕಾರ್ಜುನಲಿಂಗ, ನಂದಿ ಅಂದರೆ ವೃಷಭೇಶ್ವರ ವೀರಶೈವರ ಸಮೇತ ಹೊರಟು ನೊಳಂಬ ವೀರಶೈವರು ಹೆಚ್ಚಾಗಿ ಇದ್ದಂತ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಕುಪ್ಪೂರು ಗ್ರಾಮದ ಸಮೀಪ ಬರುವುದರೊಳಗಾಗಿ ವೃಷಭನನ್ನು ಹೇರಿದ್ದ ಬಂಡಿಯ ಅಚ್ಚು ಮುರಿದು ವಿಶ್ವಪ್ರಯತ್ನ ಮಾಡಿ ಮುಂದೆ ಸಾಗಲು ಅಡ್ಡಿ ಆತಂಕಗಳು ಒದಗಿದ್ದರಿಂದ ಆ ವೃಷಭೇಶ್ವರನನ್ನು ಗಾಡಿ ಮುರಿದ ಜಾಗದಲ್ಲೇ ಸ್ಥಾಪಿಸಬೇಕಾಯಿತು. ಇದಕ್ಕೆಲ್ಲಾ ನೆರವು ಕೊಟ್ಟವರು ಕುಪ್ಪೂರಿನ ಶರಣ ಸದ್ಭಕ್ತರು.

ಶ್ವೇತಾಚಲ ಅಥವಾ ರಜತಾದ್ರಿ ಎಂದು ಪ್ರಸಿದ್ಧಿ ಹೊಂದಿರುವ ಮಲ್ಲೇಶ್ವರನ ಉದ್ಭವಮೂರ್ತಿ ಅರ್ಚಕರು, ಮಹಾ ಗುರು ಮರುಳಸಿದ್ಧ-ಯತೀಂದ್ರರ ಅಚ್ಚುಮೆಚ್ಚಿನ ಆತ್ಮೀಯ ಶಿಷ್ಯರೂ ಆಗಿದ್ದಂತಹ ಚನ್ನವೀರೇಗೌಡರ ಪೂರ್ವಜರು ಕೆಲ ಕಾಲಾನಂತರ ಆ ಅತಿಥಿಗಳಿಗೆ ನಾಡಗೌಡರು ತಮ್ಮ ಮನೆಯ ಕನ್ಯೆಯನ್ನು ಕೊಟ್ಟು ಬಂಧುಗಳನ್ನಾಗಿ ಮಾಡಿಕೊಂಡು ತಾವು ಮಾಡುತ್ತಿದ್ದಂತಹ ಮಲ್ಲೇಶ್ವರನ ಪೂಜೆಯನ್ನೂ ಸ್ವಾಮಿಗೆ ದತ್ತಿಯಾಗಿ ಬಂದಿದ್ದಂತಹ ದೇವರ ಆಸ್ತಿಯನ್ನು ಅವರಿಗೆ ಒಂದು ನೆಲೆಯನ್ನೂ ಕೊಟ್ಟು ಕಲ್ಪಿಸಿ ಆಶ್ರಯದಾತರಾದರು. ಇವರ ಜೊತೆಯಲ್ಲೇ ಬಂದಿದ್ದ ಸಹೋದರರ ಪೈಕಿ ಕೆಲವರು ತಗಚೇಗಟ್ಟ,ಅಬೂಜಿಹಳ್ಳಿಯಲ್ಲಿ ನೆಲೆಸಿದರು,ಮತ್ತೆ ಕೆಲವರು ಪಾಶುಪತ ಪಂಥದ ಲಕುಳೀಶ ಕಾಳಾಮುಖ ನಿರಂಜನ ಗುರುವರ್ಯರ ವಿರಕ್ತ ಮಠವಿದ್ದಂತಹ ತಮ್ಮಡಿಹಳ್ಳಿಗೆ ಬಂದಾಗ ಪರಮಪೂಜ್ಯ ಗುರುವರ್ಯರ ಅಪ್ಪಣೆ ಮೇರೆಗೆ ಆ ಊರಿಗೆ ಶರಣ ಸದ್ಭಕ್ತ ನಾಡಗೌಡರು ಅವರಿಗೆ ಆಶ್ರಯ ನೀಡಿದರು ಅಲ್ಲದೆ ತಮ್ಮ ಮನೆಯ ಕನ್ಯೆಯನ್ನು ಕೊಟ್ಟು ಬಂಧುಗಳನ್ನಾಗಿ ಮಾಡಿಕೊಂಡರು. ಆಗ ಅವರು ಅಲ್ಲಿಂದ ಇಲ್ಲಿಗೆ ತಂದಿದ್ದಂತಹ ಮನೆದೇವರು ವಿರೂಪಾಕ್ಷನಕಂಬಿ, ಮಲ್ಲಿಕಾರ್ಜುನ ಲಿಂಗು, ವೀರಭದ್ರನ ವಿಗ್ರಹವಿರುವ

ಹಲಗೆದೇವರು ಇವುಗಳನ್ನು ಸ್ಥಾಪಿಸಲು ಅಂದರೆ ಇಡಲು ಊರ ಮಧ್ಯೆ ಚಿಕ್ಕದಾಗಿ ಗುಡಿಯನ್ನು ಕಟ್ಟಿದರು ಅಲ್ಲದೆ ಗುಡಿಯ ಅಕ್ಕಪಕ್ಕ ವಾಸಿಸಿದರು. ಆದ್ದರಿಂದ ಅವರಿಗೆ ಗುಡಿಹಟ್ಟಿಯವರೆಂದು ಹೆಸರಾಯಿತು.

ಹನ್ನೊಂದು ಮತ್ತು ಹನ್ನೆರಡನೇ ಶತಮಾನ ಕರ್ನಾಟಕದಲ್ಲಿ ವಿಚಾರ ಮಂಥನ ನಡೆಯುತ್ತಿದ್ದ ಕಾಲ. ಆಗ ಕರ್ನಾಟಕದಾದ್ಯಂತ ಪಾಶುಪತ ಕಾಳಾಮುಖ ಪಂಥವು ಬಹು ಉನ್ನತ ಸ್ಥಿತಿಯಲ್ಲಿತ್ತು. ಈ ಮತ ಸ್ಥಾಪಕನಾದ ಲಕುಳೀಶನವು ಕನ್ನಡ ಶಾಸನಗಳಲ್ಲಿ ಬಹಳ ಉಲ್ಲೇಖನಗಳಿವೆ. ಅವನ ನಂತರ ಆ ಪಂಥವ ಪ್ರಖ್ಯಾತ ಗುರುಗಳ ಒಂದು ಪರಂಪರೆಯೇ ಕಂಡು ಬಂದಿದೆ. ಲಕುಳೀಶನು ಕ್ರಿ.ಶ.ದ ಆದಿಗೆ ಸೇರಿದವನೆಂದು ತಿಳಿದು ಬಂದಿದೆ.

ಪಾಶುಪತ ಮತವು ಶುಭಕರ ಮತ್ತು ಲಯಕರಗಳೆಂದು ಎರಡು ಬಗೆಯಲ್ಲಿ ರೂಪುಗೊಳ್ಳುವ ಶಿವ ಅಥವಾ ಪರಮಶಿವನೇ ಸರ್ವೋತ್ತಮ ಆರಾಧ್ಯ ದೈವವೆಂದು ಅಂಗೀಕರಿಸಿದೆ. ಪಶುಪತಿ ಅಂದರೆ ಮಾನವ ಮೊದಲಾಗಿ ಇರುವ ಎಂಭತ್ನಾಲ್ಕು ಲಕ್ಷ ಪಶು, ಪಕ್ಷಿ, ಕ್ರಿಮಿ-ಕೀಟಗಳಿಗೂ ಒಡೆಯನು ಮಾನವರಿಗೆಲ್ಲಾ ಒಡೆಯನಾದ ಪರಮಶಿವನು ನಮ್ಮನ್ನೆಲ್ಲಾ ಪಾಶವೆಂಬ ಹಗ್ಗದಿಂದ ಬಂಧಿಸಿ ಅಂಕೆಯಲ್ಲಿಟ್ಟಿರುವುದು. ಅವನು ಸರ್ವೇಶ್ವರನು ಅವನ ಅರ್ಧಾಂಗಿ ಶಕ್ತಿದೇವತೆ, ಈಕೆಯು ಅವನ ಸರ್ವಾಂತರ್ಯಾಮಿಯು ಕಾಳಾಮುಖ ಗುರುಗಳು ಸರ್ವಾಂಗ ಮುಕ್ತ ಪರಿಪೂರ್ಣ ನೀತಿ ಪದ್ಧತಿ, ತತ್ವದರ್ಶನ, ಆಚಾರ-ವಿಚಾರ, ಪೂಜಾ ವಿಧಾನಗಳನ್ನು ಸ್ವತಃ ಪರಮಶಿವನ ಅಪ್ಪಣೆಯಂತೆ ಸಿದ್ಧಪಡಿಸಿ ತನ್ನ ಅನುಯಾಯಿಗಳಿಗೆ ಕಠೋರ ವೈರಾಗ್ಯ ಮಾರ್ಗವನ್ನು ತೋರಿಸಿಕೊಟ್ಟರು. ಈ ಪಾಶುಪತ ಮತವು ಅನೇಕ ಅನುಯಾಯಿಗಳನ್ನು ಆಕರ್ಷಿಸಿ ತನ್ನತ್ತ ಸೆಳೆದುಕೊಂಡಿತು.

ಸಾಧಾರಣ ಜನರು ಮಾತ್ರವಲ್ಲ ರಾಜ ಮಹಾರಾಜರು ಅವರ ಮನೆತನದವರು ಬಹಳ ಮಂದಿ ಈ ಮತವನ್ನು ಅವಲಂಭಿಸಿದರು. ನಿದರ್ಶನವಾಗಿ ಎರಡನೇ ಜಯಸಿಂಹರಾಜನ ಪಟ್ಟದರಾಣಿ ಸುಗ್ಗಲಾದೇವಿಯು ತನ್ನ ಗಂಡನು ಜೈನ ಮತವನ್ನು ಬಿಟ್ಟು ಈ ವೀರಶೈವ ಮತವನ್ನು ಗ್ರಹಿಸುವಂತೆ ಮಾಡಿದ್ದು ಈ ಲಕುಳೀಶ ಪರಂಪರಾಗತ ಕಾಳಾಮುಖ ಗುರುಗಳು ಘನ

ವಿದ್ವಾಂಸರು ಅಲ್ಲದೆ ಮಹಾತಪಸ್ವಿಗಳು ಕಟ್ಟುನಿಟ್ಟಿನ ಆತ್ಮ ಮಾರ್ಗನಿಷ್ಠರು ಆದ್ದರಿಂದ ಈ ಗುರುಗಳನ್ನು ಇತರ ಮತಾನುಯಾಯಿಗಳೂ ಕೂಡ ಅನನ್ಯ ಭಕ್ತಿಯಿಂದ ಪೂಜಿಸಿ ಗೌರವಿಸುತ್ತಿದ್ದರು.

ವೀರಶೈವ ಮತವೆಂಬುದು ತಲೆಯೆತ್ತಿ ಅಭಿವೃದ್ಧಿ ಹೊಂದಿದ್ದು ೧೨ನೇ ಶತಮಾನದ ಮತ್ತೊಂದು ಸಂಗತಿ. ಪಾಶುಪತಮತ ಪ್ರಚಾರದ ಅವಿಶ್ರಾಂತ ಚಟುವಟಿಕೆಗಳು ಈ ವೀರಶೈವ ಮತದ ಉದ್ಧಾರಕ್ಕೆ ತಕ್ಕ ಭೂಮಿಕೆಯನ್ನು ಒದಗಿಸಿದವು. ಆ ಕಾಲದ ಎಲ್ಲಾ ಶಾಸನಗಳಲ್ಲಿಯೂ ಕಾಳಾಮುಖ ಗುರುಗಳ ಬಗೆಗೆ ಸಂಗತಿಗಳು ತಿಳಿಯುತ್ತವೆ.

ವೈಷ್ಣವ ಮತದ ಪ್ರಭಾವವು ವಿಶೇಷವಾಗಿ ಹರಡಿದ್ದ ಹೊಯ್ಸಳ ರಾಜಧಾನಿ ಹಳೇಬೀಡಿನಲ್ಲಿ ಕ್ರಿ. ಶ. 1136 ರಲ್ಲಿದ್ದ ಕಾಳಾಮುಖ ಪಂಥದ ಗುರುಗಳ ವಿಷಯ ನಮಗೆ ತಿಳಿದುಬರುತ್ತದೆ. ಆಕಾಲದಲ್ಲಿ ಮತ ಗುರುಗಳು ರಾಜ್ಯದ ರಾಜಕೀಯ ಗಡಿಗಳನ್ನು ಅತಿಕ್ರಮಿಸಿ ದೇಶದ ಎಲ್ಲಾ ಕಡೆಗೂ ಹೋಗಿ ಮತ ಪ್ರಚಾರ ಮಾಡಿ ಬರುತ್ತಿದ್ದರು. ಅವರ ಉಪದೇಶಗಳೂ ದೇಶದ ಮೂಲೆ–ಮೂಲೆಯಲ್ಲಿಯೂ ಪ್ರಚಾರ ಗೊಳ್ಳುತ್ತಿದ್ದವು.

ರಾಜರು ರಾಜ್ಯದ ಪ್ರತಿಷ್ಠಿತ ಮನೆತನದವರು ತಮ್ಮ ಎಲ್ಲೆಗಳಿಂದಾಚೆ ಇರುವ ಈ ಮಠಗಳಿಗೆ, ದೇವಾಲಯಗಳಿಂದ ಈ ಎರಡು ಸ್ಥಾನಗಳಲ್ಲಿ ನಡೆಸ ತಕ್ಕಂಥಘಟಿಕಾಸ್ಥಾನ ಅಂದರೆವಿಶ್ವವಿದ್ಯಾನಿಲಯಗಳಿಗೂ ದತ್ತಿಬಿಡುತ್ತಿದ್ದರು ಹೀಗೆ ಮಾಡುವುದೆಲ್ಲಾ ಪುಣ್ಯ ಕಾರ್ಯವೆಂದು ತಿಳಿದಿದ್ದರು. ಇಂತಹ ದತ್ತಿಗಳ ಅಸಂಖ್ಯಾತ ಶಾಸನಗಳು ನಮಗೆ ದೊರೆಯುತ್ತವೆ.

ಬಸವಣ್ಣನವರ ಭಗವದರ್ಪಿತ ಜೀವನ ಎಲ್ಲಾ ಪಂಗಡಗಳ ಜನರನ್ನೂ ಈ ಮತದ ಕಡೆಗೆ ಆಕರ್ಷಿಸಿ, ಆಗ ಶಿವಭಕ್ತಿಯ ಉತ್ಥಾನಕ್ಕೆ ಕಾರಣವಾಯಿತು. ಶಿವನ ಚಿಹ್ನೆಯಾದ ಲಿಂಗವನ್ನು ಕಂಠ ಎದೆಯ ಮೇಲೆ ಧರಿಸುವುದು. ಪ್ರತಿ ದಿನವೂ ಎರಡು ಮೂರು ವೇಳೆ ಪೂಜಿಸುವುದು. ಧ್ಯಾನ, ಜಪ ಮಾಡುವುದು ಇದು ಬಹು ಸುಲಭ ವಿಧಾನ ಇವುಗಳನ್ನು ಆಚರಣೆಗೆ ತಂದರು.

ಈ ವೀರಶೈವ ಮತವು ಜಾತಿ, ಮತ, ಪಂಗಡಗಳು, ಹೆಣ್ಣು, ಗಂಡು ಬೇಧವಿಡದೆ ಎಲ್ಲರನ್ನೂ ತನ್ನ ಆವರಣಕ್ಕೆ ಸೆಳೆದು ಸೇರಿಸಿಕೊಂಡಿತು.

ಆನಂತರ ಜಾತ್ಯಾತೀತ ಸಮಾಜ ನಿರ್ಮಾಣದ ಗುರಿಯಾಯ್ತು ಆಗ ಲಕುಳೀಶ ಪರಂಪರಾಗತ ಕಾಳಾಮುಖ ವೀರಶೈವರ ತಲೆಶೋಳಿನಲ್ಲಿದ್ದ ಶಿವಲಿಂಗಗಳೆಲ್ಲ ಹೃದಯದ ಮೇಲಕ್ಕೆ ಅಂದರೆ ಎದೆಯ ಮೇಲಕ್ಕೆ ಬಂದು ಇಷ್ಟಲಿಂಗಗಳಾಗಿ ಪರಿವರ್ತನೆಗೊಂಡವು.

ಕರ್ನಾಟಕದ ಪರಂಪರೆ ಮೂ। ಲೇ। ಶ್ರೀ ಎಸ್. ಎಸ್. ರಾಘವ-ಚಾರ್ಯರು, ಅನುವಾದ ಶ್ರೀ ಎಲ್. ಗುಂಡಪ್ಪನವರು ಬಸವಣ್ಣನವರ ಕಾಲದಲ್ಲಾದ ಹೊಸ ವೀರಶೈವರು, ಶರಣರ ವಚನಗಳು ಮತ್ತು ಅವುಗಳ ತತ್ವದ ಮೂಲಕ ಪ್ರಚಾರ ಮಾಡಿಸಿದರಲ್ಲದೆ ಅವರ ಹೊಸ ಮಠಗಳು ಅವರ ಧರ್ಮ ಪ್ರಚಾರ ಸಮಾಜ ಸುಧಾರಣೆ ಮತ್ತು ಶಿಕ್ಷಣಕ್ಕೆ ಏಕಕಾಲದಲ್ಲಿ ಸೇವೆ ಸಲ್ಲಿಸಿದರು, ಪ್ರಾಚೀನ ಕಾಲದ ಮಠಗಳು ಘಟಿಕಾಸ್ಥಾನಗಳು ಈ ವೀರ-ಶೈವರ ವಶವಾದಂತೆ ಕಾಣುತ್ತದೆ. ಅವುಗಳ ಜೊತೆಗೆ ಅವರು ತಮ್ಮ ಸ್ವಂತ ಮಠಗಳನ್ನು ಕಟ್ಟಿಕೊಂಡರು.

ಕ। ಪ। ೧, ಪುಟ 423, ಮೂ। ಲೇ। ಡಾ॥ ಜಿ. ಎಸ್. ದೀಕ್ಷಿತ್‌ರವರು

ಅನುವಾದ : ಶ್ರೀ ಎಂ. ಕೆ. ರಾಜಗೋಪಾಲ್‌ರವರು

ಕ್ರಿ. ಶ. ಹತ್ತನೇ ಶತಮಾನದಲ್ಲಿ ನೊಳಂಬವಾಡಿ ಸಾಸಿರಕ್ಕೆ ಸೇರಿದ ಬೇತೂರೆಂಬ ಪಟ್ಟಣವು ಶಿವಶಕ್ತಿಯರ ಸೌಧಲಕ್ಷ್ಮಿಗೆ ತವರುಮನೆ ವಿದ್ಯಾಧಿ-ದೇವತೆಯ ಕಿರೀಟದಂತೆ ಒಪ್ಪುತ್ತಿತ್ತು. ಆ ಪಟ್ಟಣದಲ್ಲಿ ಮೂಲಸ್ಥಾನ, ಮಹದೇವನಗುಡಿ, ಪಾಂಡೇಶ್ವರ ಮತ್ತು ಧರ್ಮೇಶ್ವರ ಗುಡಿಗಳೂ ಇದ್ದವು ಅಲ್ಲಿ ಬ್ರಹ್ಮ ಶಿವ ದೇವರು, ಶ್ರೀ ಮಲ್ಲಿಕಾರ್ಜುನದೇಶಿಕರು, ಶ್ರೀ ರುದ್ರಶಕ್ತಿ ದೇವರು ಮುಂತಾದ ನೊಳಂಬ ಕಾಳಾಮುಖ ಸ್ಥಾಪನಾಚಾರ್ಯರು ಮತ್ತು ಶಿವಧರ್ಮದೀಪಿಕನಾದ ದೇಮಿಶೆಟ್ಟಿ ಮುಂತಾದ ಭಕ್ತರೂ ವಾಸವಾಗಿದ್ದರು.

ಈ ಸ್ಥಳವು ಬಹಳ ಪ್ರಸಿದ್ಧ ಐತಿಹಾಸ ಸ್ಥಳವಾಗಿತ್ತು, ನಾನು ಕೆಲಕಾಲ ಇಲ್ಲಿ ತಂಗಲು ಈ ಪವಿತ್ರ ಸ್ಥಾನ ಯೋಗ್ಯವಾದುದೆಂದು ತಿಳಿದು ಶ್ರೀ ಜ॥ ಉಜ್ಜನೀಯ ಮರುಳಸಿದ್ಧ ಯತೀಶ್ವರರು ದೇಶ ಪರ್ಯಟನೆ ಮಾಡುತ್ತಾ ಅಲ್ಲಿಗೆ ಬಂದರು. ವರ್ಣ ಧರ್ಮೀಯರಾದ ಬ್ರಾಹ್ಮಣರು ಮಾಡುತ್ತಿದ್ದ

ಯಾಗವನ್ನು ನೋಡಿ ಅವರಿಗೆ ಬಹುವಾಗಿ ತಿಳಿ ಹೇಳಿದರು. ಅವರು ಕೇಳ-
ದಾದರೂ ಆಗ ತನ್ನ ಜೊತೆಗಾರರ ಸಮೇತ ಅಲ್ಲಿನ ಬಾಲಕರನ್ನು ಸೇರಿಸಿ
ಕೊಂಡು ಯಾಗದೆದುರು ಕುಳಿತು ಸತ್ಯಾಗ್ರಹ ಹೂಡಿದರು.

ಸತ್ಯಾಗ್ರಹವನ್ನು ಕಂಡು ಬ್ರಾಹ್ಮಣರು ಹೆದರಿ ರಾಜನಿಗೆ ದೂರಿತ್ತರು.
ಇದರ ಸತ್ಯಾಸತ್ಯತೆಯನ್ನು ತಿಳಿಯದ ರಾಜನು ಆ ಗುಂಪಿನ ಮೇಲೆ ಮದ್ದಾನೆ
ಯನ್ನು ನುಗ್ಗಿಸಿ ಎಂದು ಅಪ್ಪಣೆ ಮಾಡಿದನು. ಅಲ್ಲಿಗೆ ಬಂದಂತ ಆ
ಮದ್ದಾನೆಯು ಶ್ರೀ ಗುರುದೇವನನ್ನು ಸೊಂಡಲಿನಿಂದ ತನ್ನ ಮೇಲೆ ಕುಳ್ಳರಿಸಿ
ಕೊಂಡು ಓಡಿಹೋಯ್ತು, ರಾಜಭಟ್ಟರು ಹಿಂಬಾಲಿಸಿದರು ಹಾಗೂ ಹಿಡಿಯು
ಲಾರದೆ ಸೋತು ಸೊರಗಿ ಹಿಂದಿರುಗಿದರು.

ಶ್ರೀ ಗುರುವರ್ಯರು ಮುಂದೆ ಬನ್ನಿಕೋಡು ಎಂಬ ಹಳ್ಳಿಯಲ್ಲಿ
ಕೆಲವು ದಿನಗಳಿದ್ದರು. ಈ ಊರಿನ ಹೆಸರು ಬನ್ನಿಕೋಡು ಅಲ್ಲ ಬನ್ನಿಕೂಡಿ
ಎಂದು ಯಾತ್ರೆ ಮಾಡುವ ಶರಣ ಸದ್ಭಕ್ತರೆಲ್ಲಾ ಇಲ್ಲಿ ಒಂದು ದಿನ ತಂಗಿದ್ದು
ಹೋಗಿ ಇದು ಪರಮ ಪವಿತ್ರ ಯಾತ್ರಾಸ್ಥಳ ಎಂದು. ಇದು ಹ್ಯಾಂಗಪ್ಪ
ಅಂದರೆ ಶ್ರೀಶೈಲ ಪರ್ವತದ ಬುಡದಲ್ಲಿ ಆತ್ಮಕೂರು ಎಂಬ ಗ್ರಾಮವಿದೆ.
ಇದರರ್ಥ ತೀರ್ಥಯಾತ್ರಿಗಳು ಇಲ್ಲಿ ಕುಳಿತು ತಂಗಿದ್ದು ಮುಂದೆ ಪರ್ವತಾ-
ರೋಹಣ ಮಾಡಿ ಎಂದು ಈ ಗ್ರಾಮವನ್ನು ಹಳ್ಳಿಗರ ಆಡು ಭಾಷೆಯಲ್ಲಿ
ಆತುಂಕೂರು ಎನ್ನುತ್ತಾರೆ. ಇದು ತಪ್ಪು ಹಾಗೆಯೇ ಬನ್ನಿಕೂಡು
ಎಂಬುದು ಈ ಬನ್ನಿಕೋಡಿ ಗ್ರಾಮವು ಕ್ರಿ. ಶ. 1165 ರಲ್ಲಿ ವಿದ್ಯೆ ಮತ್ತು
ವೀರಶೈವ ಧರ್ಮದ ಬೃಹತ್ ಕೇಂದ್ರವಾಗಿತ್ತು.

ಅಲ್ಲಿಸ್ವಯಂಭು ಕಲಿದೇವರು ಮತ್ತು ಮಲ್ಲಿಕಾರ್ಜುನ ದೇವಾಲಯ
ಗಳು ಶೋಭಿಸುತ್ತಿದ್ದವು. ಇಲ್ಲಿ ಬಹು ಪ್ರಸಿದ್ಧನಾಗಿದ್ದ ಕಾಳಾಮುಖಗುರು
ಜ್ಞಾನ ಶಕ್ತಿಯತಿಯು ಸ್ಥಾಪನಾಚಾರ್ಯನಾಗಿದ್ದನು. ಶ್ರೀ ಯತಿಯ
ಉತ್ಕೃಷ್ಟತೆಯು ಅಮೋಘವಾದದ್ದು ಅಲ್ಲದೆ, ಯಮ, ನೇಮ, ಸಾಧ್ಯಾಯ
ಶಕ್ತಿದೇವರು, ವಿಜಯದೇವ ಪಾಂಡ್ಯ, ರಾಜನ ಮಾತೆಯಾದ ಸೋಮಳಾ-
ದೇವಿಯಿಂದ ಪೂಜಿತರಾಗಿದ್ದರು. ಇಂತಹ ಮಹಾ ಧ್ಯಾನ, ಧಾರಣ,
ಮೌನಾನುಷ್ಠಾನ, ಸಂಪನ್ನರಾದ ಜ್ಞಾನ, ಸಂಪನ್ನರ ಮಹಾ ಮಹಿಮಾ,

ತಪೋಧನರ ದರ್ಶನಕ್ಕಾಗಿಯೇ ಅವರಿಂದ ಜ್ಞಾನಾರ್ಜನೆ ಮಾಡ-ಲೋಸುಗವೋ, ಮರುಳಸಿದ್ಧ ಯತಿಯು ಅಲ್ಲಿಗೆ ಬಂದು ನೆಲೆಸಿದನೆಂದರೆ ಅತಿಶಯೋಕ್ತಿಯಾಗಲಾರದು. ಶ್ರೀ ಗುರುವು ಬಂದು ನೆಲೆಸಿದ ದಿನದಿಂದಲೇ ಆ ಬನ್ನಿಕೂಡಿಪುರದ ಕೀರ್ತಿಯು ದಿಗ್‌ದಿಗಂತಕ್ಕೆ ಹರಡಿತು. ಅಲ್ಲಿ ಕೆಲವಾರು ದಿನಗಳಿದ್ದು ಮುಂದೆ ಜಗಳೂರು ತಾಲ್ಲೂಕಿನಲ್ಲಿರುವ ಅಸಗೋಡು ಎಂಬಲ್ಲಿ ಹೋದನು. ಈಗ ಅಸಗೊಂಡು ಒಂದು ಚಿಕ್ಕಹಳ್ಳಿಯಾಗಿದೆ.

ಕ್ರಿ.ಶ. 1054 ರಲ್ಲಿ ಚಿದಾನಂದ ಭುವನಕರ್ತಾರ ಪಂಡಿತ ದೇವರೆಂಬ ಗುರುಗಳು ಆ ಪುರದಲ್ಲಿ ವಿಸ್ತಾರವಾದ ಈಶ್ವರನ ದೇವಾಲಯವನ್ನು ನಿರ್ಮಿಸಿ ವಿದ್ಯಾಪ್ರಚಾರಕ್ಕಾಗಿ ತಪೋಧನರಾದ ಅಧ್ಯಾಪಕರನ್ನು ನೆಲೆಗೊಳಿಸಿ ಅನೇಕ ವಿದ್ಯಾರ್ಥಿಗಳನ್ನುಳ್ಳ ವಿದ್ಯಾಮಂದಿರವನ್ನು ಸ್ಥಾಪಿಸಿದರು. "ಇದು ನೊಳಂಬ ಕಾಳಾಮುಖ ಸ್ಥಾನಂ ನೈಷ್ಠಿಕವೇದಿ ಕರ್ತರ ಮಠಂ" ಎಂದು ಪ್ರಸಿದ್ಧಿ ಹೊಂದಿತು. ಈ ದೇವಾಲಯದ ಪೂಜಾರಿಗಳಿಗೂ ಮಠದಲ್ಲಿದ್ದ ಉಪಾಧ್ಯಾಯರುಗಳು ಮತ್ತು ವಿದ್ಯಾರ್ಥಿಗಳ ಸಾರೋದ್ಧಾರವಾದ ಊಟದ ವ್ಯವಸ್ಥೆಗೂ, ಮತ್ತಿಕಟ್ಟೆ ಎಂಬ ಗ್ರಾಮವನ್ನು ಅಂದಿನಅರಸುನೊಳಂಬೇಶನು ದಾನ ಮಾಡಿರುವನು. ಈ ಮಠಕ್ಕೆ ಕ್ರಿ. ಶ. 1108 ರಲ್ಲಿಯೂ, 1111 ರಲ್ಲಿಯೂ ಸಾಮಂತ ರಾಜರು ಮತ್ತು ಶ್ರೀಮಂತರು ಹೇರಳವಾಗಿ ದತ್ತಿ-ಗಳನ್ನೀ ಬಿಟ್ಟುಕೊಟ್ಟರು. "ಇದು ನೊಳಂಬ ಕಾಳಾಮುಖ ಸ್ಥಾನಂ ನೈಷ್ಠಿಕ ವೇದಕರ್ತರ ಮಠಂ" ಎಂದಿದೆಯಷ್ಟೆ. ಈ ಕಾಳಾಮುಖರು ಒಳ್ಳೆಯ ನಿಷ್ಠಾವಂತರಾಗಿ ತಲೆ ಕೋಳಿನಲ್ಲಿ ಶಿವಲಿಂಗಗಳನ್ನು ಕಟ್ಟಿದ್ದ ಕೆಚ್ಚಿನ ಶಿವೋಪಾಸಕರು ಆದುದರಿಂದ ಲಿಂಗವಂತ ಧರ್ಮದ ಇತಿಹಾಸಕ್ಕೂ ಇವರಿಗೂ ನಿಕಟವಾದ ಸಂಬಂಧವಿದೆ. ಆಗ ಅಸ್ತಿತ್ವದಲ್ಲಿದ್ದ ಪ್ರಮುಖ ಮಠಗಳಿಗೆಲ್ಲಾ ಕಾಳಾಮುಖ ಗುರುಗಳೇ ಸ್ಥಾಪನಾಚಾರ್ಯರಾಗಿರುತ್ತಿದ್ದರು.

ಅಸಗೋಡು ಸ್ವಯಂಭುಕಲಿದೇವ ಎಂಬ ಹೆಸರಿಗೆ ಬದಲಾಗಿ ಶಂಭು ಸಿದ್ಧೇಶ್ವರ ಎಂಬ ಹೆಸರು ಪ್ರತೀತಿಯಾಗಿರುವುದನ್ನು ನೋಡಿದರೆ ಮರುಳ ಸಿದ್ಧನ ಪ್ರಭಾವವು ಈ ದೇವಾಲಯದ ಮೇಲೆ ಬೀರಿದೆ ಎಂಬುದರಲ್ಲಿ ಸಂದೇಹವಿಲ್ಲ. ಘನ ಪಂಡಿತನಾದ ಮರುಳಸಿದ್ಧನು ನೈಷ್ಠಿಕ ಬ್ರಹ್ಮಚಾರಿಗಳ ಮಠಕ್ಕೆ ಬಹುಶಃ ಸ್ಥಾನ ಪತಿಯಾಗಿದ್ದನೆಂದು ತಿಳಿಯುತ್ತದೆ. ಈ

ದೇವಾಲಯದಲ್ಲಿ ಇಂದಿಗೂ ವೀರಶೈವರೇ ಸ್ಥಾನಿಕರಾಗಿರುವುದೇ ಇದಕ್ಕೆ ನಿದರ್ಶನ. ಹೀಗೆಂದು ಶ್ರೀಯುತರಾದ ಎಸ್. ಎಸ್. ಮಾಳವಾಡರು ಅಭಿಪ್ರಾಯ ಪಟ್ಟಿದ್ದಾರೆ ಎಂದು ಮರುಳಸಿದ್ಧ ಕಾವ್ಯ ವಿಮರ್ಶಕರೂ, ಇತಿಹಾಸ ಸಂಶೋಧನಾ ಧುರೀಣರೂ ಆದ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಹೇಳಿರುತ್ತಾರೆ.

ಈಗ ನಾವು ಜನ ಸಾಮಾನ್ಯರ ಮತ ಧರ್ಮಗಳನ್ನು ಪರಿಶೀಲಿಸೋಣ ಶಾಸನಗಳು ಸಾಹಿತ್ಯ ಮತ್ತು ಚರಿತ್ರೆಗಳಿಂದ ವ್ಯಕ್ತವಾಗುವ ಸಂಗತಿಯೆಂದರೆ ಒಂದಲ್ಲ ಒಂದು ರೀತಿ ಲಾಕುಳ ಕಾಳಾಮುಖ ಮತ ಹಾಗೂ ಶೈವಸಿದ್ಧಾಂತ ಗಳು ಆದಿಯಿಂದಲೂ ಇದ್ದವೆಂದು ಶೈವಾಗಮಗಳನ್ನು ಹುಡುಕಿದರೆ ಅವು ಗಳಲ್ಲಿ ಕೆಲವಾದರೂ ಕರ್ನಾಟಕದಲ್ಲೇ ಹುಟ್ಟಿದ್ದವೆಂದು ನಿರ್ಣಯಕ್ಕೆ ಪುಷ್ಟಿ ದೊರೆಯುತ್ತದೆ. ಆ ಕಾಲದಲ್ಲಿಯೇ ಕರ್ನಾಟಕದ ಜನರ ಮತ ಧರ್ಮವು ಆಸ್ತಿಕವಾಗಿತ್ತೆಂದೂ, ಶಿವಶಕ್ತಿ, ಗಣೇಶ,ಸ್ಕಂದ,ವಿಷ್ಣು. ಸೂರ್ಯದೇವರುಗಳ ಆರಾಧನೆಯಿತ್ತೆಂದೂ, ಜಗದ್ಗುರು ಶಂಕರಾಚಾರ್ಯರೂ ಮತ್ತು ಮಂತ್ರವಿಲಾಸ ನಾಟಕ ಕರ್ತೃ ನೊಳಂಬ ಪಲ್ಲವ ದೊರೆ ಮಹೇಂದ್ರನೂ, ಈ ಆಸ್ತಿಕ ಮತ ಗಳನ್ನು ನಿರ್ದೇಶಿಸುತ್ತಿದ್ದರೆಂದೂ ಸ್ಥಿರಪಟ್ಟಿದೆ.

ಕಾ।ಪ। ೧।ಮೂ।ಲೇ।ಡಾ। ಕೆ. ಕೃಷ್ಣಮೂರ್ತಿಗಳು
ಅನುವಾದ : ಶ್ರೀ ಬಿ. ರಾಮಸ್ವಾಮಿಗಳು

ಇನ್ನು ಲಕುಳೀಶ ಪರಂಪರೆಯ ಕಾಳಾಮುಖ ನೊಳಂಬ ವೀರಶೈವರ ಮಠಗಳು ಮತ್ತು ಅವುಗಳಲ್ಲಿದ್ದ ಘಟಿಕಾಸ್ಥಾನ ಅಂದರೆ ವಿದ್ಯಾಕೇಂದ್ರಗಳ ಆಕ್ರಮಣ ಮತ್ತು ಪತನ ಇವುಗಳ ವಿಚಾರ ತಿಳಿಯೋಣ.

ತೋಂಟದ ಸಿದ್ಧಲಿಂಗೇಶ್ವರರ ನಂತರ ಬಂದ 101 ವಿರಕ್ತರ ವೀರ–ಶೈವ ಚಳುವಳಿಯು ಭರದಿಂದ ಸಾಗಿತ್ತು. 12ನೇ ಶತಮಾನದ ಬಸವೇಶ್ವರರ ಆಂದೋಲನಕ್ಕಿಂತಲೂ ಮಿಗಿಲಾಗಿ ಪ್ರಭಾವ ಬೀರಿತ್ತು. ಬಸವಾದಿ ಶರಣರು ಕಲ್ಯಾಣದಲ್ಲಿಯೇಯಿದ್ದು ಚಳುವಳಿ ಮಾಡಿದರು.ಈ ವಿರಕ್ತರುಗಳಾದರೂ ನಾಡಿನ ಮೂಲೆ-ಮೂಲೆಯನ್ನೆಲ್ಲಾ ಸುತ್ತಿ ಪ್ರಚಾರ ಮಾಡಿದರು. ಇದರ ಫಲ ರಾಜಾಧಿರಾಜರು, ಪಾಳೆಯಗಾರರು ಇವರೆಲ್ಲಾ ಲಿಂಗಧಾರಿಗಳಾದರು.

12 ನೇ ಶತಮಾನದ ಬಸವಾದಿ ಪ್ರಮಂಥರ ಧ್ಯೇಯಂ, ಬ್ರಾಹ್ಮಣ, ಕ್ಷತ್ರೀಯಂ ವೈಶ್ಯ. ಶೂದ್ರ ಈ ನಾಲ್ಕು ವರ್ಣಗಳ ಜಾತಿ ಭೇಧ, ಹೆಣ್ಣು-ಗಂಡೆಂಬ ತಾರತಮ್ಯ ತೊಡೆದುಹಾಕಿ ಕಾಯಕನಿರತ ಮಾನವ ಕಲ್ಯಾಣಕ್ಕಾಗಿ ಹೋರಾಡಿ ದರುಃ. ಈ 101 ಜನ ವಿರಕ್ತರಾದರೋ ನಾಲ್ಕು ವರ್ಣಜಾತಿಗಳನ್ನೇನೋ ಖಂಡಿಸಿದರು. ಆದರೆ ಅವುಗಳ ಜಾಗದಲ್ಲಿ ಅಯ್ಯ, ಭಕ್ತ ಎಂಬ ಎರಡು ಜಾತಿಗಳನ್ನು ಸೃಷ್ಟಿಸಿದರು. ಈ ಸಂಕುಚಿತ ವಂಚನೆಯನ್ನು ಜನರು ಆಗ ಅರ್ಥ ಮಾಡಿಕೊಳ್ಳಲಿಲ್ಲ. ನಾಲ್ಕು ವರ್ಣಗಳನ್ನು ತೊಡೆದು ಎರಡು ವರ್ಣ ಗಳನ್ನು ಸೃಷ್ಟಿಸಿದಂತೆಯೇ ಕಾಯಕ ತತ್ವದ ಗತಿಯುೂ ಬೇರೆ ರೂಪು ತಾಳಿ ಕಂಕುಳಲ್ಲೊಂದು ಜೋಳಿಗೆ ಕೈಯ್ಯಲ್ಲೊಂದುಬಡಗಿ ಎಂಬಂತಾಯ್ತು. ಅಯ್ಯ ಎಂದರೆ ಮೇಲು, ಭಕ್ತ ಎಂದರೆ ಕೀಳು ಎಂಬ ಭಾವನೆ ಬೆಳೆಸಿದರು. ಇಷ್ಟೇ ಅಲ್ಲ ಭಕ್ತನು ಎಂದೆಂದಿಗೂ ಅಯ್ಯ ಅಂದರೆ ಗುರುವಾಗಲಾರ ಎಂಬ ಹುರುಳಿ ಲ್ಲದ ವಾದ ಹುಟ್ಟಿಸಿ "ಭಕ್ತೋ ಮಾಹೇಶ್ವರಾಸ್ಮೃತಾಃ" ಭಕ್ತನೇ ಮುಂದೆ ಮಹೇಶನಾಗುವನು ಅಂದರೆ ಗುರುವಾಗುವನು ಎಂಬುದನ್ನು ವಿದ್ಯಾವಿಹೀನ ರಾದ ಭಕ್ತರು ಅರಿಯದಂತೆ ಮರೆಸಿದರು,

ಭಗವಾನ್ ಬಸವಣ್ಣನವರು ಕಟ್ಟಿದ ಸೌಧ ಕಳಚಿ ಬಿತ್ತು. ಇನ್ನು ರಾಜಾಧಿರಾಜರಿಗೂ, ಪಾಳೆಯಗಾರರಿಗೂ ಲಿಂಗ ಕಟ್ಟಿದ್ದರಲ್ಲ ಅವರಿಗೂ ತಾವೇ ಅಯ್ಯಗಳಾಗಿ ಅವರಿಂದ ದಾನದತ್ತಿಗಳನ್ನು ಪಡೆದುಕೊಂಡಿದ್ದು ಅಲ್ಲದೆ ಅವರಿಂದ ಹೊಸ ಮಠಗಳನ್ನು ಕಟ್ಟಿಸಿಕೊಂಡು ಭಗವಾನ್ ಬಸವಣ್ಣ ನವರ ಉದಯಕ್ಕಿಂತಲೂ ಶತ ಶತಮಾನಗಳ ಮುಂಚೆಯೇ ತಲೆತೋಳಿನಲ್ಲಿ ಲಿಂಗ ಧರಿಸಿದ್ದ ಲಕುಳೀಶ ಕಾಳಾಮುಖ ನೊಳಂಬ ಗುರುಗಳ ಮಠಗಳನ್ನೂ ಹೊಸ ಲಿಂಗಧಾರಿ ರಾಜರು, ಪಾಳೆಯಗಾರರಿಂದ ಹೆದರಿಸಿ ಬೆದರಿಸಿ ತಾವು ಆಕ್ರಮಿಸಿಕೊಂಡರು. ಅನಂತರ ನಾವೇ ಅನಾದಿ ವೀರಶೈವರೆಂದು ಬೊಬ್ಬೆ ಹಾಕುತ್ತಾ ದಾನದತ್ತಿಗಳನ್ನು ಪಡೆದರು.

ಇವುಗಳಂತೆಯೇ ಬಾಳೆಹಳ್ಳಿ ಉಜ್ಜಯಿನಿ ಮಠಗಳ ಗತಿಯೂ ಆಯ್ತು ಹೊಸ ನೀರು ಬಂದು ಹಳೆ ನೀರನ್ನು ತಳ್ಳಿತು ಎಂಬ ಗಾದೆಯು ಹುಟ್ಟಿದ್ದು ಆಗಲೇ ಇರಬೇಕು, ಇದೇನೇ ಇರಲಿ ಕ್ರಿ. ಶ. 12 ನೇ ಶತಮಾನಕ್ಕಿಂತ ಮುಂಚೆಯೇ ಅಂದರೆ 3-4 ನೇ ಶತಮಾನಗಳಿಂದಲೇ ತಪೋನಿಧಿಗಳು, ಘನ

ಪಂಡಿತರೂ ಆಗಿ ತಲೆಯ ಮೇಲೆ ಸಂಸ್ಕಾರ ಪೂರಿತ ಲಿಂಗಳನ್ನು ಹೊತ್ತು ಪೂಜಿಸುತ್ತಿದ್ದು, ಮಠ ಮಹಂತುಗಳನ್ನು ಕಟ್ಟಿ ದಕ್ಷಿಣ ಭಾರತದಲ್ಲೆಲ್ಲಾ ಶಿವ ಪಥವನ್ನು ಸಾರಿದ ಪಾಶುಪತ ಪಂಥ ಲಕುಳೀಶ ಪರಂಪರೆಯ ಕಾಳಾಮುಖ ನೊಳಂಬ ಗುರುಗಳು ಕ್ಷೇತ್ರವನ್ನು ಹಸನು ಮಾಡಿದ್ದರು. 12ನೇ ಶತಮಾನದಲ್ಲಿ ಭಗವಾನ್ ಬಸವೇಶ್ವರರು ಉದಿಸಿ ಇಂತಹ ಸ್ವಚ್ಛಗೊಳಿದ ಪವಿತ್ರ ಕ್ಷೇತ್ರವು ನಮಗೆ ಇನ್ನೆಲ್ಲಿಯೂ ದೊರೆಯಲಾರದೆಂದು ತಿಳಿದು ಮೊದಲೇ ಇದ್ದಂತ ವೀರಶೈವರ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲಗಳ ತಿರುಳನ್ನೆಲ್ಲಾ ವಚನರೂಪದಲ್ಲಿ ಅರುಹಿ ವೀರಶೈವ ಮತೋದ್ಧಾರ ಮಾಡಿದರು. ಭಗವಾನ್ ಮ ಹಾ ತ್ಮ ಎನಿಸಿಕೊಂಡರು, ಭಗವಾನ್ ಬಸವಣ್ಣನವರ ಅಮೃತವಾಣಿಯು ದಿಗ್ ದಿಗಂತಕ್ಕೆಲ್ಲಾ ಹರಡಿ ಎಲ್ಲಾ ಜನಗಳ ಮನಮುಟ್ಟಿ ಎಚ್ಚರಗೊಂಡಿತು. ಮಹಾತ್ಮ ಬಸವೇಶ್ವರರು ಉದಿಸಿ ವೀರಶೈವ ಮತೋದ್ಧಾರ ಮಾಡದಿದ್ದಲ್ಲಿ ಇಷ್ಟೊತ್ತಿಗೆ ವೀರಶೈವ ಎಂಬುದು ಇತಿಹಾಸದಿಂದ ಮರೆಯಾಗುತ್ತಿತ್ತೇನೋ. ಇನ್ನು ಲಕುಳೀಶ ಪರಂಪರೆ ಅಂದರೆ ಪಶುಪತಿ ಶಿವನನ್ನು ಸಾಕ್ಷಾತ್ಕರಿಸಿಕೊಂಡು ಆತನು ಅನುಸರಿಸಿದ. "ಲಾಕುಳವೆಂಬ ಯೋಗ ದಂಡವನ್ನು ಹಿಡಿದವನು ಲಕುಳೀಶನು". ಆದ್ದರಿಂದ ಅವನ ಪರಂಪರೆಯ ಗುರುಗಳು ಮತ್ತು ಶಿಷ್ಯರಿಗೆ ಲಕುಳೀಶ ಪರಂಪರಾಗತರು ಎಂದು ಹೆಸರಾಗಿದೆ.

ಶ್ರೀ ಗುರು ಶಿವ ಸಿದ್ಧರಾಮಣ್ಣನವರಿಗೆ ಶಿವನು "ಸರ್ವಸಿದ್ಧಿಗೆ ತವರು ಮನೆಯೆನಿಪ ವಜ್ರದ ಲಾಕುಳವನ್ನಿತ್ತು" ಎಂದು ಹೇಳಿದೆ ಎಂದರೆ ವಜ್ರದಿಂದ ಮಾಡಿದ್ದು ಎಂಬರ್ಥವಲ್ಲ. ವಜ್ರದಂತೆ ಕಠೋರವಾದ ಮಹಿಮೆಯುಳ್ಳ ಯೋಗದಂಡ ಎಂದರ್ಥ. ಸಿದ್ಧರಾಮಣ್ಣನವರು ಬೊಮ್ಮಣ್ಣನೊಬ್ಬನನ್ನು ಪಾಪಕೂಪದಿಂದೆತ್ತಲು ಈ ಲಾಕುಳ ದಂಡವನ್ನು ಅವನ ಕೈಲಿ ಹಿಡಿಸಿದರು. ಅವನನ್ನು ಕೂಪದಿಂದ ಮೇಲೆತ್ತಿದಾಗ ಅಲ್ಲಿದ್ದ ಪಾಪಿಗಳ ಗುಂಪೇ ಒಬ್ಬರನ್ನೊಬ್ಬರು ಹಿಡಿದು ಸರಮಾಲೆ ಸರಪಳಿಯಾಗಿ ಮೇಲೆದ್ದದ್ದು ಆ ಲಾಕುಳ ಯೋಗ ದಂಡಕ್ಕೆ ಅಂತಹ ಮಹತ್ತಿತ್ತು. ಅಂಥಾದ್ದನ್ನು ಕೇಳಿಲ್ಲವೆ? ಈ ಲಕುಳೀಶ ಗುರುವು ಪಡೆದಿದ್ದನು ಆದ್ದರಿಂದಲೇ ಲಕುಳೀಶನೆಂದು ಹೆಸರಾಯಿತು. ಈನೊಳಂಬ ಲಿಂಗಾಯತರು ಬಸವಣ್ಣನವರ ಕಾಲಕ್ಕಿಂಥ ಅದೆಷ್ಟೊ ಶತಮಾನಗಳ ಮುಂಚೆಯೇ ಸಂಸ್ಕಾರದಿಂದ ಪರಿಪೂರಿತ

ವಾದ ಚಿಕ್ಕಚಿಕ್ಕ ಶಿವಲಿಂಗಗಳನ್ನು ತಮ್ಮ ಗುರು ಜಂಗಮರಿಂದ ಪಡೆದು ಶಿವ ದೀಕ್ಷೆ ಹೊಂದಿ ತಮ್ಮ ತಲೆ ತೋಳಿನಲ್ಲಿ ಧರಿಸಿ ಲಿಂಗಾಂಗಿ, ಲಿಂಗಾಯುತ, ವೀರಶೈವ ಎನಿಸಿಕೊಂಡಿದ್ದರು. ಮಧ್ಯಯುಗದ ಕಾಲದಲ್ಲಿ ಬೆಳಗಿದ ಅಲ್ಪ ಸಂಖ್ಯಾತ ಮತಗಳಲ್ಲಿ, ಕಾಳಾಮುಖ ಮತವು ಅತ್ಯಂತ ಪ್ರಮುಖವಾದದ್ದು ಮುಖ್ಯವಾಗಿ ಪಾಶುಪತರ ಆಚರಣೆಯುಳ್ಳ ಧರ್ಮವಾಗಿದ್ದಿತು. ಅನಂತರ ಒಂದನೇ ಶತಮಾನದಿಂದ ಲಕುಲೀಶ ಉಪದೇಶಾನಂತರ ಪ್ರಬುದ್ಧಮಾನಕ್ಕೆ ಬಂತೆಂದು ಹೇಳಲಾಗಿವೆ. ಗಮನಾರ್ಹ ಸಂಗತಿಯೆಂದು ದಕ್ಷಿಣ ಭಾರತದಲ್ಲಿ ಆಂಧ್ರ–ಕರ್ನಾಟಕಕ್ಕೆ ಸಿಮೀತವಾಗಿತ್ತು. ಕಾಶ್ಮೀರ ಶೈವದೊಡನೆ ಒಂದು ರೀತಿಯ ಸಂಬಂಧವನ್ನು ಪಡೆದಿತ್ತು ಎಂಬುದಕ್ಕೆ ಬಹಳಷ್ಟು ಶಾಸನಾಧಾರ ಸೂಚನೆಗಳಿವೆ. ಇದನ್ನು ಪರ್ವತಾವಳಿಯ ದೇವವ್ರತ ಮಹಾಮುನಿಯ ಸಂತತಿಗೆ ಸೇರಿದ ಕಾಶ್ಮೀರ ದಿವ್ಯಜ್ಞಾನಿ ಕಾಶ್ಮೀರದ ದೇವನೆಂಬುವನು ದಕ್ಷಿಣಕ್ಕೆ ಬಂದು ನೆಲೆಸಿ ವಿಸ್ತರಿಸಿದನೆಂದು ಶಿಕಾರಿಪುರದ ಶಾಸನ 99 ರಲ್ಲಿ ತಿಳಿಸುತ್ತದೆ.

ಈ ಮತ ಸಾಕಷ್ಟು ಶಕ್ತಿಯುತವಾಗಿದ್ದಲ್ಲದೆ ಏಳನೆಯ ಶತಮಾನದಿಂದ ಸುಮಾರು ಏಳು ನೂರು ವರ್ಷಗಳವರೆಗೆ ಕರ್ನಾಟಕದಲ್ಲಿ ಜೈನ ಬೌದ್ಧ ಧರ್ಮಗಳನ್ನು ಎದುರಿಸಿ ಉಳಿದುಕೊಂಡು ಬಂದಿತು. ಈ ಕಾಳಾಮುಖರ ಪ್ರಬಲ ಕೇಂದ್ರಗಳು ಬನವಾಸಿ, ನೊಳಂಬವಾಡಿಯ ಹೆಂಜೇರು, ನೊಳಂಬೇಶ್ವರ. ಘಟಿಕಾಸ್ಥಾನ ಮತ್ತು ನೊಳಂಬವಾಡಿ 32ಸಾಸಿರಕ್ಕೆ ಸೇರಿದ ಇತರ ಮುಖ್ಯ ಸ್ಥಳಗಳು ಬೆಂಗಳೂರು ಸಮೀಪದ ನಂದಿ, ಹಿಂದೂಪುರಕ್ಕೆ ಸಮೀಪದ ಲೇಪಾಕ್ಷಿ, ಕೆರಗೋಡಿ ಮತ್ತು ಹಳೇಬೀಡು, ಶಿಕಾರಿಪುರಗಳೂ ಅದರ ಪ್ರಮುಖ ಕೇಂದ್ರಗಳಾಗಿದ್ದವು. ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯವು ಕಾಳಾಮುಖ ಪಂಥದ ಅತ್ಯುನ್ನತ ಸ್ಥಾನವಾಗಿತ್ತು. ಬನವಾಸಿ ಪ್ರಾಂತ್ಯದಲ್ಲಿ ಶಿವ ದೇವಾಲಯಗಳಿಗೆ ಜಮೀನುಗಳಿಗೆ ಮತ್ತು ಅಪಾರ ಐಶ್ವರ್ಯಾದಿಗಳಿಗೆ ಒಡೆಯರಾಗಿದ್ದ ಅನೇಕ ಮಠಪತಿಗಳಿದ್ದರು.

ಬಾಣ ದೊರೆ ಒಬ್ಬನ ತಾಯಿ ರತ್ನಾವಳಿಯ ದತ್ತಿ ಶಾಸನ ಒಂದರಲ್ಲಿ ಕಾಳಾಮುಖ ಗುರು ಕಾಲಶಕ್ತಿಯ ಮುಖ್ಯ ಶಿಷ್ಯ ಈಶ್ವರದೇವನನ್ನು ನಂದಿ ಗುಡಿ ಮಠ ಮತ್ತು ದೇವಾಲಯದ ಅಧ್ಯಕ್ಷನೆಂದು ವಿವರಿಸಲಾಗಿದೆ. ಈ

ಮಠಪತಿಯೇ ದತ್ತಿಯನ್ನು ಸ್ವೀಕರಿಸಿದವನು ಎಂದು ತಿಳಿಸಿದೆ. ಬೂತರಸನ ಕಾಲದ ಕ್ರಿ. ಶ. 870-907 ಮಧ್ಯೆ ಕೆರಗೋಡಿ ರಂಗಾಪುರದ ತಾಮ್ರಪಟ ಗಳಲ್ಲಿ ತ್ರಿಪುರ ಹರ ಶಿವನ ಶಿಷ್ಯನಾದ ಕಾಳಾಮುಖ ಮುನಿ ತ್ರಿಣೇಶ ಶಿವದೇವ ನೆಂಬುವನಿಗೆ ಇಡೀ ಗ್ರಾಮ ಒಂದನ್ನು ದತ್ತಿಯಾಗಿ ಕೊಟ್ಟ ವಿಷಯವಿದೆ. ಕ್ರಿ. ಶ. 943 ರ ಇನ್ನೊಂದು ಶಾಸನದಲ್ಲಿ ಕ್ಷೀಣವಾಗುತ್ತಿದ್ದ ಕಾಳಾಮುಖ ಮತವು ಸ್ವತಃ ಲಕುಳೀಶನ ಅವತಾರನಾದ ಮುನಿನಾಥ ಚಿಲ್ಲುಕನಿಂದ ಉದ್ಧರಿಸಲ್ಪಟ್ಟಿತು ಎಂದು ಹೇಳಿದೆ. ಇನ್ನೊಬ್ಬ ಮುನಿ ಸೋಮೇಶ್ವರನು ಲಾಕುಳ ಸಿದ್ಧಾಂತವನ್ನು ಪ್ರಜ್ವಲಗೊಳಿಸಿದನೆಂದು ತಿಳಿಸಿದೆ. ಕಾಳಾಮುಖ ಗುರುಗಳು ರಾಜಮನೆತನಗಳ ಮೇಲೆ ಪ್ರಭಾವ ಬೀರಲು ಸಾಧ್ಯವಾದಷ್ಟು ಚಾಳುಕ್ಯ ಚಕ್ರವರ್ತಿ 2 ನೇ ಜಗದೇಕಮಲ್ಲ ಜಯಸಿಂಹನ ಕ್ರಿ. ಶ. 1015-1042ರ ಆಳ್ವಿಕೆಯಲ್ಲಿ ಇವನು ಜೈನ ಧರ್ಮೀಯನು ತನ್ನ ಪತ್ನಿ ಸುಗ್ಗಲಾ-ದೇವಿಯಿಂದ ಪ್ರೇರಿತನಾಗಿ ಕಾಳಾಮುಖ ಪಂಥಕ್ಕೆ ಮತಾಂತರ ಹೊಂದಿದನು ಈ ಸಂದರ್ಭದಲ್ಲಿ ರುದ್ರಗಣ ಲಕುಳೀಶ ಪಂಡಿತನ ಹೆಸರು ಉಕ್ತವಾಗಿದೆ. (ಷಿಕಾರಿಪುರ ಶಾಸನ 126) ಈ ಮತ ಪ್ರಬಲ ಬೆಳೆದುದಲ್ಲದೆ ಜನಪ್ರಿಯವೂ ಆಗಿತ್ತು. ರಾಜಗುರುವೆಂದೂ, ಎಪ್ಪತ್ತೇಳು ದೇವಾಲಯಗಳಿಗೆ ಒಡೆಯ ನೆಂದೂ ಕೀರ್ತಿತನಾಗಿದ್ದ ಕಾಳಾಮುಖ ಗುರು ಸರ್ವೇಶ್ವರನ ಶಕ್ತಿದೇವನ ಕ್ರಿ. ಶ. 1070 ರ ಮಹಿಮೆಯನ್ನು ಶಾಸನಗಳು ಕೊಂಡಾಡಿವೆ. (ಸೊರಬ ಶಾಸನ 276) 2ನೇ ಸೋಮೇಶ್ವರನು ಈ ಗುರುವಿನ ಬಗ್ಗೆ ಅಪಾರ ಗೌರವ ಆದರಗಳನ್ನು ಇಟ್ಟಿದ್ದನೆಂಬುದು ಖಚಿತ. ಅವನ ಬಳಿಕ ಬಂದ ತ್ರಿಭುವನ ಮಲ್ಲ ಪೆರ್ಮಾಡಿಯು 1076 ಜೈನಧರ್ಮದ ಬಗ್ಗೆ ವಿಶ್ವಾಸವುಳ್ಳವನಾದರೂ ಕಾಳಾಮುಖ ಧರ್ಮದ ಬಗ್ಗೆಯೂ ಮನಃ ಪೂರ್ವಕ ಪ್ರೋತ್ಸಾಹ ನೀಡುತ್ತಿದ್ದನು.

ಕರ್ನಾಟಕದ ಅನೇಕ ಶಾಸನಗಳಲ್ಲಿ ಹಲವಾರು ಕಾಳಾಮುಖ ಗುರುಗಳ ಹೆಸರುಗಳು ಕಂಡುಬರುತ್ತವೆ. ಕಲಾಶಕ್ತಿ, ಕ್ರಿ. ಶ. 640, ತ್ರಿಣೇತ್ರ ಶಿವಾ ಚಾರ್ಯ 900, ಈಶ್ವರ ದೇವ ರುದ್ರಗಣ 1030, ಲೋಕನಾಥದೇವ 1065 ಸರ್ವೇಶ್ವರಶಕ್ತಿ 1070, ಪೂರ್ಣಾನಂದ ಪಂಡಿತ 1075, ಚಂದ್ರಭೂಷಣ

ಪಂಡಿತ, ಪದ್ಮಶಿವ ಪಂಡಿತ, ಆತನ ಶಿಷ್ಯ ನಾಗಶಿವ ಪಂಡಿತ, ಇವರೆಲ್ಲಾ 1183, ಕರ್ನಾಟಕ ಕಾಳಾಮುಖ ಮತದ ಇತಿಹಾಸದಲ್ಲಿ ಕೊನೆಯದಾದ ದೊಡ್ಡ ಹೆಸರು ಕ್ರಿಯಾಶಕ್ತಿ ದೇವರದು.

ಕ್ರಿ. ಶ. 1370 ಈ ಗುರುವನ್ನು ಶಾಸನಗಳಲ್ಲಿ ಶ್ರೀಮದ್ ರಾಜಗುರು ಮಹಾ ಮಂಡಲಾಚಾರ್ಯ ವಾಣೀವಿಲಾಸ ಕ್ರಿಯಾಶಕ್ತಿ ಶಿವಗುರು ಕಾಶೀ-ವಿಲಾಸ ಕ್ರಿಯಾಶಕ್ತಿಯೆಂದು ವಿಶ್ಲೇಷಿಸಿದ್ದಾರೆ. ಈತನು ಸುಪ್ರಸಿದ್ಧ ವಿದ್ಯಾರಣ್ಯರ ಸಮಕಾಲೀನನಾಗಿದ್ದನು. ಅವರಿಬ್ಬರೂ ಒಬ್ಬನೇ ಎಂದು ಹೇಳುವವರೂ ಉಂಟು. ಶಾಸನಗಳ ಪ್ರಕಾರ ಹರಿಹರ-ಬುಕ್ಕ, ಎರಡನೇ ಹರಿಹರರ ಕುಲಗುರುವಾಗಿದ್ದನು, ಅವರು ಆ ಗುರುವನ್ನು ಶಿವನ ಅವತಾರ ವೆಂದು ಆರಾಧಿಸುತ್ತಿದ್ದರು. ಈ ಕಾಳಾಮುಖ ಪಂಥವು ಕರ್ನಾಟಕದಲ್ಲಿ ಸುಮಾರು ಏಳುನೂರು ವರ್ಷಗಳ ಕಾಲ ಉಜ್ವಲವಾಗಿ ಬೆಳಗಿ ಧಾರ್ಮಿಕ ಮತ್ತು ಸಾಮಾಜಿಕ ಭಾವನೆಗಳ ಬೆಳವಣಿಗೆಗೆ ಕಾರಣವಾಗಿ ಹದಿನಾಲ್ಕನೆಯ ಶತಮಾನ ಅಂತ್ಯಕ್ಕೆ ಇದ್ದಕ್ಕಿದ್ದಂತೆ ಮಾಯವಾದಂತೆ ಕಾಣುತ್ತದೆ.

ಒಂಬತ್ತನೆಯ ಶತಮಾನದಲ್ಲಿದ್ದ ರಾಜಶೇಖರನೆಂಬ ಕವಿಯು ಸಂಸ್ಕಾರಪೂರಿತ ಚಿಕ್ಕ-ಚಿಕ್ಕ ಶಿವಲಿಂಗಗಳನ್ನು ತೋಳಿನ ಮೇಲೆ ಧರಿಸುವ ಪದ್ಧತಿ ಲಕುಳೀಶ ಕಾಳಾಮುಖ ಶೈವ ಪಂಥದಲ್ಲಿ ಇದ್ದಿತೆಂದು ಉಲ್ಲೇಖಿಸಿ-ದ್ದಾನೆ. ಅಲ್ಲದೆ ಸರ್‌ಜಾನ್ ಮಾರ್ಷಲ್ಲರು ಮೊಹೆಂಜೊದಾರೋ ಪುರಾವೆ ಗಳಿಂದ ಆ ಕಾಲದಲ್ಲಿಯೇ ಮನುಷ್ಯ ದೇಹದ ಮೇಲೆ ಧರಿಸಬಹುದಾದ ಶಿವ ಲಿಂಗಗಳು ಇದ್ದವೆಂದೂ ತಿಳಿಸಿದ್ದಾರೆ.

ಕಾ।ಪಾ।ಪು 208 ಮೂ।ಲೇ। ಪ್ರೊ। ಎಸ್. ಕೆ. ರಾಮಚಂದ್ರರಾವ್
ಅನುವಾದ : ಡಾ। ಎಂ. ಚಿದಾನಂದಮೂರ್ತಿ

ಕೌಂಡಿನ್ಯನು ಈ ಪಾಶುಪತ ವ್ರತ ವಿಚಾರವಾಗಿ ಹೀಗೆ ಹೇಳಿದ್ದಾನೆ. ಸ್ವರ್ಣಮಯವಾದ ಮೇರು ಪರ್ವತವನ್ನೇ ದಾನ ಮಾಡುವುದಕ್ಕಿಂತಲೂ ಸಮಸ್ತ ಭೂ ಮಂಡಲವನ್ನೇರುವ ದಾನ ಮಾಡುವುದಕ್ಕಿಂತಲೂ ಅಲ್ಲದೆ ನವರತ್ನಗಳಿಂದ ತುಂಬಿರುವ ಸಮುದ್ರವನ್ನೇ ದಾನ ಮಾಡುವುದಕ್ಕಿಂತಲೂ ಹೆಚ್ಚಿನ ಫಲ ಕೊಡುವುದು ಈ ಪಾಶುಪತ ವ್ರತವು ಎಂದಿದ್ದಾನೆ. ಪ್ರಪ್ರಥಮವಾಗಿ ಪಾಶುಪತ ಧರ್ಮವೇ ಮೂಲವೆಂದೂ ಮತ್ತೆಲ್ಲಾ ಶೈವ

ಪಂಥಗಳೂ ಅದರ ಶಾಖೆಗಳೆಂದೂ ಈ ಶೈವ ಪಂಥಗಳೆಲ್ಲಾ ಲಕುಲೀಶನಿಂದ ಸ್ಥಾಪಿತವಾದದ್ದೇ ಬಹಳ ಹಳೆಯದೆಂದೂ, ಲಿಂಗಪುರಾಣ, ವಾಯುಪುರಾಣ ಗಳಲ್ಲಿ ಸೂತಸಂಹಿತೆಯಲ್ಲಿ ಈ ವಿಚಾರ ಬಂದಿದೆಯೆಂದೂ ಉಕ್ತವಾಗಿದೆ. ಈ ಶಾಖೆಯ ಸ್ಥಾಪಕ ಭಟ್ಟಾರಕ ಲಕುಲೀಶನು ಶ್ರೀ ಕೃಷ್ಣನ ಸಮಕಾಲನಾಗಿ ದ್ವಾಪರಾಂತ್ಯದಲ್ಲಿ ಬದುಕಿದ್ದನೆಂದೂ, ಆತನು ರುದ್ರನ ಅವತಾರವೆಂದು ಹೇಳಿದೆ.

ಈಗ ಮತ್ತೊಂದು ಮುಖ್ಯ ವಿಚಾರ ಪ್ರಪಂಚದ ಮೊಟ್ಟ ಮೊದಲ ಯುದ್ಧ ನಡೆದ ಕಾಲ ಕ್ರಿ.ಶ. 1914-1918 ಸುಮಾರು ಇಲ್ಲಿಗೆ 75 ವರ್ಷ ಗಳ ಹಿಂದೆಯೇ ಈ ನೊಳಂಬ ವೀರಶೈವರು ಮತ್ತು ಅವರ ಗುರುಗಳ ಮುಖಕ್ಕೆ ಮಸಿ ಬಳಿಯಲು ಸನ್ನಾಹ ಹೊಂದಿ ಹಿಂದಿನ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕುಪುರದ ಕೇರಿಯ ಪಂಚಮರು ಅದೇ ಗ್ರಾಮದ ನೊಣಬರ ಮೇಲೆ ಅಂದರೆ ನಂದಿಗುಡಿಯ ಶ್ರೀಮಠದ ಸ್ವಾಮಿಗಳ ಮೇಲೆ ಹಾವೇರಿ ಕೋರ್ಟಿನಲ್ಲಿ ದಾವೆ ಹೂಡಿದರು. ವಿವರ ಹೀಗಿದೆ.

ಈ ನೊಣಬರು ಈಚಿನ ಲಿಂಗಾಯಿತರು ಇವರು ಭಕ್ತರು ಇವರು ಜಂಗಮತ್ವ, ಗುರುತ್ವಕ್ಕೆ ಅನರ್ಹರು ಇವರಿಗೆ ಮಠಮಾನ್ಯಗಳಿಲ್ಲ. ನಾವು ಇವರ ಗುರುವಿಗೆ ಎಂದೂ ಮಾನ್ಯತೆ ಕೊಟ್ಟಿಲ್ಲ. ಅಂಥಾದ್ದರಲ್ಲಿ ಶ್ರೀ ಬಸವೇಶ್ವರ ದೇವರ ಜಾತ್ರೆ ಉತ್ಸವದಲ್ಲಿ ಇವರನ್ನು ಕರೆತಂದು ರಥದಲ್ಲಿ ಕುಳ್ಳಿರಿಸಿ ಜಾತ್ರೆ ಉತ್ಸವವನ್ನು ನೆರವೇರಿಸಿದ್ದಾರೆ. ಈಗ ದೇವಾಲಯ ಮತ್ತು ದೇವರು ಅಪವಿತ್ರವಾಯ್ತು. ನಾವು ಯಾರೂ ಈಗ ಆ ಅಪವಿತ್ರ ದೇವಾಲಯಕ್ಕೆ ಹೋಗಿ ಪೂಜೆ, ಧಾರ್ಮಿಕ ಕಾರ್ಯಗಳನ್ನು ಮಾಡುವಂತಿಲ್ಲ ಪುನಃ ಅದನ್ನು ಪವಿತ್ರ ಮಾಡಲಿಕ್ಕೆ ಆರ್ನೂರು ರೂಪಾಯಿಗಳು ಬೇಕಾಗು-ತ್ತವೆ. ಇದನ್ನು ನ್ಯಾಯಾಧೀಶರು ಮನಗಂಡು ಅವರು ಗುರುತ್ವವನ್ನು ಅನರ್ಹತೆಗೊಳಿಸಿ ದಂಡ ಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಆಯ್ತು ಹಾವೇರಿ ಮುನ್ಸೀಫ್ ಕೋರ್ಟಿನಲ್ಲಿ ದಾವೆ ದಾಖಲಾಯ್ತು ಆಗ ನೊಳಂಬರಲ್ಲಿ ಘನ ವಿದ್ವಾಂಸರೂ, ಶಾಸ್ತ್ರಿಗಳೂ, ವಕೀಲರೂ ಇಲ್ಲದ್ದ ರಿಂದ ಯಾರು ಯಾರನ್ನೋ ನಿಯಮಿಸಿಕೊಂಡು ಸುಮಾರು 4 ವರ್ಷಗಳು

ಸುಂದವು. ಆ ಶಾಸ್ತ್ರಿಗಳು ಕೂಡ ವಾದಿಗಳೂ ಬರೆದು ಮುದ್ರಿಸಿದ್ದ ಗ್ರಂಥಗಳನ್ನೇ ನೋಡಿ ವಾದಿಸಿ ಕೊನೆಗೆ ನನ್ನಿಂದ ಸಾಧ್ಯವಿಲ್ಲಾ ನೀವು ಯಾರನ್ನಾದರೂ ನೋಡಿಕೊಳ್ಳಿ ಎಂದಾಗ ಇವರಿಗೆ ಆಕಾಶವೇ ಕಳಚಿ ಮೇಲೆ ಬಿದ್ದಂತಾಯಿತ್ತು. ಆ ಸಮಯದಲ್ಲಿ ಬೆಂಗಳೂರು ದಾನಶೂರ ಕಂಬಿಸಿದ್ಧ-ರಾಮಣ್ಣನವರ ಕೃಪಾಶ್ರಯದಲ್ಲಿ ಕಾಶಿಯಲ್ಲಿ ತರ್ಕಶಾಸ್ತ್ರ ವ್ಯಾಸಂಗ ಮಾಡುತ್ತಿದ್ದಂಥ ಶ್ರೀ ಮದ್ದಾರುಕಾಚಾರ್ಯ ಗುರುಪರಾನ್ವಯಾನ್ವಿತ ಭೂಸುಕ್ಷೇತ್ರ ತಿಪಟೂರು ಶಿಡ್ಲೆಹಳ್ಳಿ ಸಂಸ್ಥಾನಾಧೀಶ್ವರರೂ, ಹಾಗಲವಾಡಿಯ ಕೋರು ಮಠಾಧ್ಯಕ್ಷರೂ ಮತ್ತು ಹಾಗಲವಾಡಿ ಪ್ರಭುಗಳ ರಾಜಗುರುಗಳೂ ಆಗಿ-ದ್ದಂಥ ಗುರು ಶಿವಯೋಗಿ ಸಿದ್ಧೇಶ್ವರದೇಶಿಕೇಂದ್ರರ ಪರಂಪರಾಗತ ಶ್ರೀ ಶ್ರೀ ಗುರು ಕರಿಬಸವ ರಾಜದೇಶಿಕೇಂದ್ರ ಮಹಾಸ್ವಾಮಿಗಳವರು, ಬೆಂಗಳೂರಿನ ಯಜಮಾನರ ಕಡೆಯಿಂದ ಎಲ್ಲಾ ವಿಚಾರ ತಿಳಿದು ಮನನ ಮಾಡಿಕೊಂಡು ಈಗ ನಮಗೆ ಅಂತಿಮ ಪರೀಕ್ಷೆ ಕಲ್ಕತ್ತಾ ಕೇಂದ್ರದಲ್ಲಿ ನಡೆಯುತ್ತದೆ, ಪರೀಕ್ಷೆ ಮುಗಿಸಿಕೊಂಡು ಬರುತ್ತೇವೆ ಈ ವಿಚಾರ ಶ್ರೀ ನಂದಿಗುಡಿ ಪರಮಪೂಜ್ಯ ಗುರುವರ್ಯರಿಗೂ ಶರಣ ಸದ್ಭಕ್ತರಿಗೂ ತಿಳಿಸಿ ಎಂದು ಪತ್ರ ಬರೆದರು.

ಕಲ್ಕತ್ತಾ ಪಟ್ಟಣ ನಮ್ಮ ಬೃಹತ್ ಭಾರತದಲ್ಲೇ ದೊಡ್ಡ ನಗರದ ಆ ನಗರ ವಿದ್ವತ್ ಪರೀಕ್ಷಾ ಕೇಂದ್ರ, ಅಲ್ಲಿ ಏಕೋ ಪ್ರಕಾರವಾಗಿ 18 ದಿನಗಳು ವ್ಯಾಕರಣ, ತರ್ಕಶಾಸ್ತ್ರದ ಪರೀಕ್ಷೆಗಳು ನಡೆಯುತ್ತಿದ್ದವು. ಕ್ರಿ.ಶ. 1918ರಲ್ಲಿ ಇಂಪ್ಲುಯಂಜಾ ಕಾಯಿಲೆ ಆ ಬೃಹತ್ ನಗರದಲ್ಲಿ ಒಂದೊಂದು ದಿನವೂ ಸಹಸ್ರಾರು ಹೆಣಗಳು ಬೀಳುತ್ತವೆ. ನಗರ ಸಭೆಯವರು ಸಾಧ್ಯವಿಲ್ಲದೆ ಹೆಣಗಳನ್ನು ವ್ಯಾನಿನಲ್ಲಿ ತುಂಬಿ ಗಂಗಾನದಿಗೆ ಸುರಿಯುತ್ತಿದ್ದರು. ಗುರುವರ್ಯರು ಇದನ್ನೆಲ್ಲಾ ಕಣ್ಣಾರೆ ನೋಡಿದರೂ ಹೆದರಲಿಲ್ಲ. ತಮ್ಮ ಧ್ಯೇಯ ಸಾಧನೆ ಈಡೇರಿಸಿಕೊಂಡು ಕಲ್ಕತ್ತಾ ನಗರದಿಂದ ಕಾಶಿಗೆ ಹಿಂದಿರುಗದೇ ನೇರ ನಂದಿಗುಡಿಗೆ ಪ್ರಯಾಣ ಬೆಳೆಸಿದರು. ಪಟ್ಟ ಶಿಷ್ಯರೆಲ್ಲಾ ಮನದುಂಬಿ ಬಂದು ಅದ್ದೂರಿ ಸ್ವಾಗತ ಮಾಡಿದರು. ನಾಲ್ಕು ದಿನ ಕಟ್ಟೆಯ ಅಧ್ಯಯನ, ಸುಧಾರಣೆ ಅನಂತರ ತುಮ್ಮಿನ ಕಟ್ಟೆಗೆ ಹೋಗಿ ತಂಗಿದ್ದು ಹಾವೇರಿಗೆ ಪ್ರಯಾಣ. ಮಾರನೆಯ ದಿನವೇ ನ್ಯಾಯಾಲಯ ಪ್ರವೇಶ, ಚಿಕ್ಕವಯಸ್ಸಿನ ಸಣಕಲ ದೇಹದ ಗುರುವರ್ಯರನ್ನು ನೋಡಿ ಆ ಕಡೆಯವರ ತಾತ್ಸಾರದ ವ್ಯಂಗ್ಯ ನುಡಿಗಳು ಅವನ್ನೆಲ್ಲಾ ನುಂಗಿಕೊಂಡು ಕೋಪತಾಪಕ್ಕೆ ಎಡೆಗೊಡದೆ

ಮುಂದೆ ವಾದ ಪ್ರತಿವಾದ ಸಮಾಸಮ, ಒಮ್ಮೆ ಆ ಕಡೆಯವರು ಪ್ರಶ್ನೆ ಹಾಕಿದಾಗ ಅದಕ್ಕೆ ಇಡೀ ನ್ಯಾಯಾಲಯವೇ ಚಕಿತಗೊಳ್ಳುವಂತೆ ಇವರ ಉತ್ತರ ಅವರ ಪ್ರಶ್ನೆಗಳೇ ಅವರಿಗೆ ಮೂಲ ಅವರ ಪ್ರಶ್ನೆಗಳಿಗೆಲ್ಲಾ ನ್ಯಾಯ ಸಮ್ಮತ ಉತ್ತರ ಒಮ್ಮೆ ಆ ಕಡೆಯವರಿಂದ ಅವರೇ ಅರಿಯದ ಅವರಿಗೆ ಮುಳುವಾದ ಪಂಚಮುರ್ಕ್ಕ ವಿಚಾರ ಪ್ರಶ್ನೆ. ಅದಕ್ಕೆ ನೇರ ಉತ್ತರ ಗುರು-ವರ್ಯರಿಂದ, ಆಗ ಅವರೆಲ್ಲಾ ತಬ್ಬಿಬ್ಬಾಗಿ ಬೆಚ್ಚಿ ಬೆವರಿದರು. ಆ ಕಡೆಯ ವಕೀಲರು, ಶಾಸ್ತ್ರಿಗಳು, ಗುರುಗಳೆಲ್ಲ ಒಮ್ಮೆಲೇ ಏನ್ರಿ ಇದು ಕೋರ್ಟ್ ಎಚ್ಚರವಿರಲಿ ಬಾಯಿಗೆ ಬಂದ ಹಾಗೆ ಒದರಿ ನಿಮ್ಮ ಶ್ಯಾಣೇತನವನ್ನು ತೋರ ಬ್ಯಾಡ್ರಿ ಎಂದು ಗದರಿಸಿ ನುಡಿದಾಗ ಗುರುವರ್ಯರರು ಸೌಮ್ಯವಾಗಿಯೇ ಅಹುದು ಇದು ಶ್ರೇಷ್ಠ ನ್ಯಾಯಾಲಯವೆಂಬುದು ಗೊತ್ತು, ಅಲ್ಲದೆ ಶ್ರೇಷ್ಠ ನ್ಯಾಯಮೂರ್ತಿಗಳೂ, ನ್ಯಾಯವಾದಿಗಳೂ, ಶೋತೃಗಳೂ ಇದ್ದಾ-ರೆಂಬುದೂ ಗೊತ್ತು ಅಲ್ಲದೆ ಜರ। ಜಗದ್ಗುರು ಕಂಬಳಿ ಪಾವಟಿ ಮೆಣಸಿನ ಕಾಯಿ ವಕೀಲರಿದ್ದಾರೆಂಬುದೂ ಗೊತ್ತು. ಸುಮ್ಮ-ಸುಮ್ಮನೆ ಗದರಿಸಿ ಹೆದರಿಸಲು ಬರಬೇಡಿ, ಮೊದಲು ಸರಿಯಾಗಿ ಪ್ರಶ್ನೆಮಾಡುವುದನ್ನು ಕಲಿತು ವಾದಿಸಿರಿ ಎಂದು ಉತ್ತರಿಸಿ ನ್ಯಾಯಾಲಯವೇ ಚಕಿತಗೊಳ್ಳುವಂತೆಮಾಡಿದ ರಂತೆ, ಮತ್ತೊಂದು ಪ್ರಶ್ನೆ ನಂದಿಗುಡಿ ಮಠಾಧ್ಯಕ್ಷರಿಗೆ ಐದು ಎಕರೆ ಭೂಮಿ ದಾನ ಬಂದಿರುವಬಗ್ಗೆ ಆ ಕಡೆ ವಕೀಲರು ಅಲ್ಲಗಳೆದಾಗ ನಂದಿಗುಡಿ ಇದ್ದದ್ದ ರಿಂದಲೆ ಆ ಮಠದ ಜಂಗಮರಿಗೆ ಅವರು ಮಾಡುತ್ತಿದ್ದ ಒಳ್ಳೆಯ ಕೆಲಸವನ್ನು ನೋಡಿ ಮೆಚ್ಚಿ ರಾಜನು ದತ್ತಿ ಬಿಟ್ಟಿದ್ದಾನೆಂದು ವಾದಿಸಿ ವಾತದ ಸ್ಥಿರೀಕರಣ ವಾದ ನಂತರ ಅವರ ಸುತ್ತು ಬಳಸು ಪ್ರಶ್ನೆಗಳಿಗೆಲ್ಲಾ ಸರಿಯಾದ ಉತ್ತರ ಕೊಟ್ಟು ನೀವೆಲ್ಲ ಇತ್ತೀಚಿನ ಲಿಂಗಾಯತರು ಎಂಬುದಕ್ಕೆ ಉತ್ತರವಾಗಿ ಬಸವಣ್ಣನವರ ಜನನಕ್ಕಿಂತ ಅದೆಷ್ಟೋ ಶತಮಾನಗಳ ಮುಂಚೆಯೇ ಇದ್ದಂಥ ಪಾಶುಪತ ಪಂಥ ಲಕುಳೀಶಾನ್ವಯ ಕಾಳಾಮುಖ ನೊಳಂಬ ಗುರುಗಳು ತಮ್ಮ ಜಡೆ ಮತ್ತು ತೋಳುಗಳಲ್ಲಿ ಸಂಸ್ಕಾರದಿಂದ ಪರಿಪೂರಿತ ವಾದ ಶಿವಲಿಂಗಗಳನ್ನು ಧರಿಸಿ ಅರ್ಚಿಸುತ್ತಿದ್ದುದೂ ಅವರ ನೊಳಂಬ ವೀರ ಶೈವ ಶಿಷ್ಯರೆಲ್ಲಾ ಅದೇ ರೀತಿ ಅವರ ಗುರು ಜಂಗಮರಿಂದ ಅನುಗ್ರಹ ಪಡೆದು ದೀಕ್ಷೆ ಹೊಂದಿ ಲಿಂಗಗಳನ್ನು ಧರಿಸಿ ಪೂಜಿಸುತ್ತಿದ್ದುದೂ ಎಲ್ಲವನೂ

ಸವಿಸ್ತಾರವಾಗಿ ತಿಳಿಸಿ ಮತ್ತೆ ಮತ್ತೆ ಪ್ರಶ್ನೆಗಳ ಸುರಿಮಳೆಯಾದಾಗ ಅವಕ್ಕೆಲ್ಲಾ ತಡೆಬಡೆಯಿಲ್ಲದೆ ಉತ್ತರ ಕೊಟ್ಟರಂತೆ.

ಇದನ್ನೆಲ್ಲಾ ಸವಿಸ್ತಾರವಾಗಿ ಆಲಿಸಿ ಕೇಳಿ ದಂಡ ನ್ಯಾಯಾಧೀಶರು ಈ ರೀತಿ ತಮ್ಮ ತೀರ್ಪು ಕೊಟ್ಟಿದ್ದಾರೆ ತೀರ್ಪಿನ ಮುಖ್ಯ ಸಾರಾಂಶ ಈ ರೀತಿ ಇದೆ.

ವಾದಿಗಳು ಹೇಳುವ ಜಾತಿ ಭೇದವು ಲಿಂಗಾಯಿತ ಧರ್ಮದ ಮೂಲ ಆಧಾರಭೂತವಾದ ತತ್ವಗಳ ಹೊರಗಿನದಾಗಿದೆ. ಈ ಧರ್ಮ ಸ್ಥಾಪನಾ-ಚಾರ್ಯರು ಬ್ರಾಹ್ಮಣಾದಿ ಚಾತುರ್ವರ್ಣಗಳ ಮತ್ತು ತತ್ಸಂಬಂಧವಾದ ಕರ್ಮಗಳಿಗೆ ವಿರೋಧವಾಗಿ ತಮ್ಮ ಮತವನ್ನು ಪ್ರಚಾರಗೊಳಿಸಿದರು. ಬೇಕಾದ ವರ್ಣದವರು ಈಧರ್ಮವನ್ನು ಅಂಗೀಕರಿಸಬಹುದು ಈ ಧರ್ಮವು ಶಿವಭಕ್ತರೆಲ್ಲರಿಗೂ ಶಿವಕುಲವಲ್ಲದೆ ಅಂದರೆ (ಶಿವಶಕ್ತಿಯರೇ ತಂದೆ ತಾಯಿಗಳು) ಬೇರ ಕುಲವಿಲ್ಲ ಎಲ್ಲಾ ಶಿವಭಕ್ತರೂ ಸಹೋದರರೆಂದು ಬೋಧಿಸುತ್ತದೆ. ಜಾತಿ ಭೇದಗಳಿಗೆ ಈ ಧರ್ಮದಲ್ಲಿ ಅವಕಾಶವಿಲ್ಲ. ಶೈವರತ್ನಾಕರದ 119 ನೇ ಪುಟದ 56 ನೇ ಶ್ಲೋಕದಲ್ಲಿ ಶಿವಸಂಸ್ಕಾರವನ್ನು ಹೊಂದಿದವರಲ್ಲಿ ಜಾತಿ ಭೇದವನ್ನು ಮಾಡಲಾರದು ಎಂದು ಹೇಳಿದೆ. ಶಿವ ಸಂಸ್ಕಾರವೆಂದರೆ ವೀರಶೈವ ಧರ್ಮವನ್ನು ಅಂಗೀಕರಿಸುವವರಿಗೆ ಮಾಡಬೇಕಾದ ಒಂದುವಿಶಿಷ್ಟ ದೀಕ್ಷೆಯು ಪುನಃ ಈ ಶೈವ ರತ್ನಾಕರದಲ್ಲಿಯೇ ಶಿವಭಕ್ತನಾದವನು ಪಾರ್ವತಿಯು ತನ್ನ ತಾಯಿಯೆಂದು, ಶಿವನು ತನ್ನ ತಂದೆಯೆಂದೂ ಶಿವಭಕ್ತರು ಅಣ್ಣ-ತಮ್ಮಂದಿರೆಂದೂ, ಜಗತ್ತೆಲ್ಲಾ ತನ್ನ ದೇಶವೆಂದೂ ತಿಳಿಯುವುದೆಂದು ಹೇಳಿದೆ. ಇದರಂತೆಯೇ ಅನಾದಿ ವೀರಶೈವಸಾರದಲ್ಲಿಯೂ, ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿಯೂ ಲಿಂಗಾಯಿತರಲ್ಲಿ ಜಾತಿಗಳಿಲ್ಲವೆಂದೂ ಹೇಳಿದೆ. ಯಾವುದೇ ಜಾತಿಯವನಾಗಲಿ ಶಿವಭಕ್ತನಾದರೆ ಅವನನ್ನು ಶಿವನೆಂದು ಕಾಣಬೇಕು. ಶಿವಭಕ್ತನ ಜಾತಿಯನ್ನು ಪರೀಕ್ಷೆ ಮಾಡುವ ಕಾರಣವಿಲ್ಲೆಂದು ಪ್ರತಿವಾದಿ ಶಾಸ್ತ್ರಗಳು ಸಿದ್ಧಾಂತ ಶಿಖಾಮಣಿಯ ಅಭಿಪ್ರಾಯವನ್ನು ಕೊಟ್ಟು ವಾದಿಸಿರುತ್ತಾರೆ, ಆದ್ದರಿಂದ ನಮಗೆ ಲಿಂಗಾಯಿತರಲ್ಲಿ ಜಾತಿ ಭೇದ ಇಲ್ಲವೆಂದು ತಿಳಿದು ಬಂದಿದೆ,

ಇದೂವರೆವಿಗೂ ನಾವು ತಿಳಿದ ವಿಚಾರಗಳು ಪ್ರತಿವಾದಿಗಳ ಮಂತವನ್ನು ಪುಷ್ಟೀಕರಿಸುತ್ತೇವೆ. ಸಾಮಾನ್ಯ ವೀರಶೈವನೂ ಕೂಡ (ಭಕ್ತನು) ಮುಂದಿನೆರಡು ಸ್ಥಳಗಳಿಗೆ ಹೋಗುವುದು ಅಂದರೆ ಜಂಗಮ ಗುರುಗಳು ಆಗುವುದು ಜಾತಿಯ ಮೇಲೆ ಅವಲಂಬಿಸದೇ ಕೇವಲ ಸಂಸ್ಕಾರದ ಮೇಲೆ ಅವಲಂಬಿಸಿದೆ. ಸಿದ್ಧಾಂತ ಶಿಖಾಮಣಿಯಲ್ಲೂ ಕೂಡ ಜಾತಿಯಿಂದಲೇ (ಮಹೇಶ್ವರ) ಮಹೇಶ್ವರನಾಗಲಿಕ್ಕೆ ಅಂದರೆ ಜಂಗಮನಾಗಲಿಕ್ಕೆ ಬರುತ್ತ-ದೆಂದು ಎಲ್ಲಿಯೂ ಹೇಳಿಲ್ಲ. ಭಕ್ತನೇ ಜಂಗಮನಾಗಲಿಕ್ಕೆ ಅರ್ಹನಾದ್ದರಿಂದ ಗುರುಪೀಠಕ್ಕೂ ಆತನು ಅರ್ಹನಾಗಿರುತ್ತಾನೆ. ಇದರಂತೆಯೇ ಬಣಜಿಗ, ಶೀಲವಂತ, ಪಂಚ ಮಸಾಲಿ ಮೊದಲಾದ ಲಿಂಗಾಯಿತರನ್ನು ಈವೊತ್ತಿನ ವರೆಗೆ ಜಂಗಮಗುರುಸ್ಥಲಕ್ಕೆ ತಕ್ಕೊಳ್ಳುತ್ತಾ ಬಂದ ಸಂಪ್ರದಾಯವು ನಡೆದು ಬಂದಿದೆಯಾದ್ದರಿಂದ ವಾದಿಗಳು ಇದುವರೆಗೂ ವಾದಿಸಿದ್ದೆಲ್ಲ ಮಹತ್ವವಿಲ್ಲದ್ದಾಗಿದೆ. ವಾದಿಗಳು ಇದುವರೆವಿಗೂ ಅವಲಂಬಸಿದ ಗ್ರಂಥಗಳು ಅವರ ವಿರುದ್ಧವಾಗಿವೆ ಏತಕ್ಕೆಂದರೆ ಆ ಗ್ರಂಥಗಳೆಲ್ಲಾ ಇತ್ತೀಚಿನವು. ನೂತನವಾದವು. ಆದರೂ ಕೂಡ ವಾದಿಗಳು ಅವಲಂಭಿಸಿದ ಗ್ರಂಥಗಳ ವಚನಗಳೂ ಕೂಡ ನಿರಾಧಾರ ಸಿಫಾರಿಸಿನಂತಿವೆ ಎಂದು ಮೊದಲಾಗಿ ನ್ಯಾಯಾ-ಧೀಶರು ತಮ್ಮ ನಿರ್ಣಯವನ್ನು ಸಾರಿದ್ದಾರೆ. ಅಲ್ಲದೆ ಮತ್ತೆ ಹೀಗೆಂದಿದ್ದಾರೆ ವಾದಿಗಳು ವಿವಾದಿತ ರಥೋತ್ಸವವನ್ನು ಮಾಡಲಿಕ್ಕೆ ತಮ್ಮ ಗುರುಗಳೊ-ಬ್ಬರಿಗೇ ಅಧಿಕಾರವಿರುತ್ತದೆಂಬ ಮಾತನ್ನು ಸಿದ್ಧಮಾಡಿಲ್ಲ. ಪ್ರತಿವಾದಿಗಳು ತಾವು ಮಾಡುವ ಕಾರ್ಯಗಳನ್ನು ಪುರಾವೆಗಳೊದಗಿಸಿ ಸಿದ್ದಮಾಡಿದ್ದಾರೆ. ಅದ್ದರಿಂದ ಅವರೇ ಈ ಕಾರ್ಯವನ್ನು ಮಾಡತಕ್ಕದ್ದು ವಾದಿಗಳಿಗೂ ಇದಕ್ಕೂ ಸಂಬಂಧವಿಲ್ಲ ಇವರು ನೂತನ ಲಿಂಗಾಯತರು ಎಂಬುದಕ್ಕೆ ಯಾವ ಪುರಾವೆ ದೊರೆಯಲಿಲ್ಲ ಬದಲಾಗಿ ಬಸವಣ್ಣನವರ ಜನನಕ್ಕಿಂತ ಮುಂಚೆಯೇ ಲಿಂಗಾಯುತರಾಗಿದ್ದಂಥ ಲಕುಲೀಶಾನ್ವಯ ಕಾಳಾಮುಖ ನೊಳಂಬ ಗುರುಗಳು ಅವರ ಪರಂಪರೆ ಕ್ರಿ. ಶ. 745 ರಲ್ಲಿಯೇ ಕರ್ನಾಟಕದಲ್ಲಿ ಆಳಿದ ನೊಳಂಬ ಪ್ರಭುಗಳಿಗೆ ಇವರು ಗುರುಗಳಾಗಿದ್ದರು. ಅಲ್ಲದೆ ಸ್ವತಃ ನೊಳಂಬ ರಾಜರೇ ನಂದಿಗುಡಿ ಮಠ ಕಟ್ಟಿಸಿಕೊಟ್ಟು ದಾನದತ್ತಿ ಬಿಟ್ಟಿದ್ದು ಇತ್ಯಾದಿ ಪುರಾವೆಗಳು ಇತಿಹಾಸದಿಂದ ತಿಳಿಯುತ್ತದೆ. ಇದನ್ನು ಪ್ರತಿವಾದಿಗಳ ಶಾಸ್ತ್ರಿಗಳೂ ಸ್ವೀಕರಿಸಿದ್ದಾರೆ, ಇನ್ನು ಪವಿತ್ರ ಮಾಡಲು ಅರು ನೂರು ರೂ. ಗಳನ್ನು

ಕೊಡಿಸಿಕೊಡಬೇಕೆಂದು ಕೇಳಿದ್ದೀರಿ. ನಿಮ್ಮ ವಾದ ವಿವಾದಗಳನ್ನು ಕೇಳಿ ತಿಳಿದ ಮೇಲೆ ಇಲ್ಲಿ ಅಪವಿತ್ರತೆಯೇ ಕಾಣುವುದಿಲ್ಲ. ಇನ್ನು ನಿಮ್ಮ ಮನಸ್ಸಿನ ಭ್ರಮೆ ದೂರವಾಗಲು ನಿಮಗೆ ಗೋವು ಪವಿತ್ರ ಆದ್ದರಿಂದ ಗೋಮಯ ಗೋಮೂತ್ರಗಳನ್ನು ದೇವರ ಮೇಲೆ ಎರೆದು ನಿಮ್ಮ ಭ್ರಮೆಯನ್ನು ನಿವಾರಿಸಿ ಕೊಳ್ಳಿ ಎಂದು ತೀರ್ಪಿತ್ತು, ಅವರವರ ಖರ್ಚು ಅವರದೇ ಎಂದು ಹೇಳಿ ಮುಕ್ತಾಯಗೊಳಿಸಿದ್ದಾರೆ.

ಹೀಗೆ ತೀರ್ಪು ಓದಿದ ದಿನ ಇಡೀ ನ್ಯಾಯಾಲಯವಲ್ಲದೆ ಹೊರಗಡೆ ಸಹಸ್ರಾರು ಅಭಿಮಾನಿ ಶರಣ ಸದ್ಭಕ್ತ ಶಿಷ್ಯರೆಲ್ಲಾ ಕರತಾಡನ ಮಾಡುತ್ತಾ ಜೈಕಾರ ಹಾಕಿ ಹಾವೇರಿ ನಗರದಲ್ಲಿ ಶ್ರೀ ಗುರುಗಳ ಉತ್ಸವ ನಡೆಸಿದರಂತೆ, ನಂತರ ಇನ್ನು ಮುಂದೆ ಹದಿನೈದು ದಿನಕ್ಕೆ ಹಣಜಿ ಮಾದಾಪುರದಲ್ಲಿ ಬೃಹತ್ ಉತ್ಸವ, ಮಹಾಸಭೆ ಸೇರಿತಂತೆ. ಅಲ್ಲಿಗೆ ಮೈಸೂರು ಸೀಮೆಯ ಎಲ್ಲಾ ನೊಳಂಬ ಮಠಾಧೀಶ್ವರರು, ಜಂಗಮರು, ಭಕ್ತರು ಮತ್ತು ಸಹೋದರ-ರಂತಿದ್ದ ಕೋಟುಕಟ್ಟೆ ಮುಗಿಯುವವರೆಗೂ ಹಾವೇರಿ ನಗರಕ್ಕೆ ಸೌದೆ, ಹಾಲು-ಮೊಸರು, ಊಟದ ಎಲೆ ವ್ಯವಸ್ಥೆ ಮಾಡಿದ ಧರ್ಮಾತ್ಮರಾದ ಸಾಧು ಸದ್ಧರ್ಮ ತರಳಬಾಳು ಜಗದ್ಗುರುಗಳ ಶಿಷ್ಯರೂ. ಅಲ್ಲದೆ ನಂದಿಗುಂಡಿ ಮಠಕ್ಕೆ ಆತ್ಮೀಯರಾಗಿದ್ದ ಹದಿನೆಂಟು ಪಣದವರೂ ಸೇರಿ ಶ್ರೀ ಗುರುವನ್ನು ಕೊಂಡಾಡುತ್ತಾ ಗುರು ಕಾಣಿಕೆ ಸಮರ್ಪಿಸಿದರಂತೆ ಇಂತಹ ನೊಳಂಬ ವೀರ ಶೈವ ಸಮ್ಮೇಳನವು ಅದಕ್ಕಿಂಥ ಹಿಂದೆ ಎಂದೂ ನಡೆಸಿರಲಿಲ್ಲವಂತೆ. ಹೀಗೆಂದು ತಿಪಟೂರು, ಶಿಡ್ಲೆಹಳ್ಳಿ ಮಠದ ಪಟ್ಟವಲ್ಲರಿಯಲ್ಲಿದೆ. ಆಗಲೇ ಶ್ರೀ ಗುರು ವರ್ಯರಿಗೆ ಧಾರವಾಡದ ಬಾಗಿಲಿನಿಂದ ಬೆಂಗಳೂರಿನವರೆಗೂ ಇರುವ ನೊಳಂಬ ಜನಾಂಗದವರೆಲ್ಲಾ ವರ್ಷಾಸನ, ದೀಪಾರಾಧನೆಗೆ ಧನ ಕಾಣಿಕೆಕೊಟ್ಟು ಮಠದ ಶಿಷ್ಯರಾದರು.

ನಂದಿಗುಡಿಯಿಂದ ನೇರೆ ಸ್ವಸ್ಥಳ ಸಂಸ್ಥಾನ ಶಿಡ್ಲೆಹಳ್ಳಿಗೆ ಬಂದು ಅಲ್ಲಿ ಕೆಲದಿನಗಳಿದ್ದು ತಿಪಟೂರು ನಗರಕ್ಕೆ ಆಗಮನ, ನಗರದ ಪಶ್ಚಿಮ ಬಡಾವಣೆ ಯಲ್ಲಿ ಗುರುಕುಲಾನಂದಾಶ್ರಮ ಸ್ಥಾಪನೆ, ಊಟ, ವಸತಿ, ಉಚಿತ ವಿದ್ಯಾರ್ಥಿ ನಿಲಯ, ಹೈಸ್ಕೂಲು, ವ್ಯಾಸಂಗಕ್ಕಾಗಿ ಧಾರವಾಡ, ನಂದಿಗುಂಡಿ, ಶಿವಮೊಗ್ಗ

ಕಡೆಯಿಂದ ವಿದ್ಯಾರ್ಥಿಗಳ ದಂಡೇ ದೌಡಾಯಿಸಿತು. ಉತ್ತೀರ್ಣರಾಗಿ ಅದೆಷ್ಟೋ ಜನ ನೌಕರಿ ಪಡೆದು ಈಗಲೂ ನಿವೃತ್ತರಾಗಿ ಶ್ರೀ ಗುರು ಸ್ಮರಣೆ ಮಾಡುತ್ತಿದ್ದಾರೆ.

ಈ ನ್ಯಾಯಾಲಯ ತೀರ್ಪು ವಿಚಾರ ನಾನೇನು ಸ್ವತಃ ಬರೆದಿದ್ದಲ್ಲ. ಶ್ರೀ ಗುರುವರ್ಯರ ಶಿಷ್ಯನಾದ ನನಗೆ ಬೋಧಿಸುತ್ತಿದ್ದಾಗ ವಿದ್ಯೆಯ ಮಹತ್ವವನ್ನು ತಾವು ಹಿಂದೆ ಮಾಡಿದ ವಾದದ ವಿಷಯವನ್ನು ಆಗಾಗ ತಿಳಿಸುತ್ತಿದ್ದರು ಈ ಹಿಂದೆ ಕ್ರಿ. ಶ. 1944ರಲ್ಲಿ ನಾನು ಬೆಂಗಳೂರಿನಿಂದ ಓದಿ ಹಿಂದಿರುಗಿದ ನಂತರ ಶ್ರೀಗಳವರು ನನ್ನನ್ನು ನಂದಿಗುಡಿಗೆ ಕರೆದುಕೊಂಡು ಹೋಗಿ ಅಲ್ಲಿನ ಜಂಗಮ ಮಕ್ಕಳಿಗೆ ಸಂಸ್ಕೃತ ವೇದಾಧ್ಯಯನ ಮಾಡಿಸಲು ಬಿಟ್ಟಿದ್ದರು, ನಾನು ಅಲ್ಲಿ ಮತ್ತು ಅತ್ತಿಕಟ್ಟೆ ಮಠದಲ್ಲಿ ನಾಲ್ಕು ವರ್ಷಗಳು ಪಾಠ ಪ್ರವಚನ ಮಾಡುತ್ತಿದ್ದೆ. ಆಗ ನಂದಿಗುಡಿಯ ಮಠಸ್ಥ, ಜಂಗಮರೂ, ವಯೋ-ವೃದ್ಧರೂ ಆಗಿದ್ದು ಅವರ ಕಣ್ಣೆದುರೇ ನಡೆದಿದ್ದ ಈ ವ್ಯವಹಾರದ ಕಥೆಯನ್ನೆಲ್ಲಾ ವೇ॥ ಬಸವರಾಜಯ್ಯನವರು ಮತ್ತು ವೇ॥ ಮುದುಕಯ್ಯನವರು ನನಗೆ ಸವಿಸ್ತಾರವಾಗಿ ತಿಳಿಸಿದ್ದರು ಅಲ್ಲದೆ ಮಠದಲ್ಲೇ ಇದ್ದಂಥ ತೀರ್ಪು ಕಾಪಿಗಳನ್ನು ನೋಡಿದ್ದೆ ಈಗಲೂ ನೋಡಿ ಬರೆದಿರುತ್ತೇನೆ. ಇದೂ ಅಲ್ಲದೆ ಮುಖ್ಯವಾಗಿ ಶಿವಶರಣ ಸೇವಕ ವೀರಪ್ಪ ಬಸಪ್ಪ ಬಿಳಿಅಂಗಡಿ, ಬಿ. ಎ., ಎಲ್‌ಎಲ್.ಬಿ., ವಕೀಲರು ಹುಬ್ಬಳ್ಳಿ ಇವರು ಬರೆದು ಪ್ರಸಿದ್ಧಿಸಿರುವ "ವೀರಶೈವರಲ್ಲಿ ಜಾತಿ ಭೇದಗಳಿಲ್ಲ" ಎಂಬ ಗ್ರಂಥವನ್ನು ಆಧಾರವಾಗಿಟ್ಟುಕೊಂಡು ಬರೆದಿರುತ್ತೇನೆ. ಈಗ ತಾವು ಅವರ ವಿಚಾರಧಾರೆಯನ್ನೇ ಕೇಳಿರಿ.

ಈ ಹಿಂದೆ ವೈದಿಕ ಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಾಲ್ಕು ವರ್ಣಗಳನ್ನು ಮಾಡಿಕೊಂಡು ಬ್ರಾಹ್ಮಣರು ತಾವೇ ಹೆಚ್ಚು ಎನ್ನುತ್ತಾ ಉಳಿದವರ ಬಗ್ಗೆ ಅನಾದರಣೆ ತೋರುತ್ತಾ ಬಂದಿದ್ದ-ರಿಂದ ಉಳಿದವರೆಲ್ಲಾ ಉದಾಸೀನರಾಗಿ ತಾವಿದ್ದ ಸ್ಥಿತಿಯಲ್ಲೇ ಇದ್ದು ರಾಷ್ಟ್ರ ಹಿತ ರಕ್ಷಣೆಯ ಕಾರ್ಯದಲ್ಲಿ ವಿಮುಖರಾದ್ದರಿಂದ ಪರದೇಶದ ವೈಶ್ಯರು ಅಂದರೆ ಇಂಗ್ಲೀಷರು ವ್ಯಾಪಾರದ ನೆಪವೊಡ್ಡಿಕೊಂಡು ಬಂದು ನೆಲಸಿ ಇಡೀ ಭರತ ಭೂಮಿಯನ್ನು ನಮ್ಮಲ್ಲಿ ಒಗ್ಗಟ್ಟಿಲ್ಲದ ಕಾರಣ ತಮ್ಮ ಕೈವಶ ಮಾಡಿಕೊಂಡರು. ನಾಲ್ಕು ಕೋಟಿ ಇಂಗ್ಲೀಷರು ನಲ್ವತ್ತು ಕೋಟಿ ಹಿಂದೂಗಳನ್ನು

ತಮ್ಮ ದಾಸ್ಯದಲ್ಲಿಟ್ಟು ಜಗತ್ತಿನ ಇತಿಹಾಸದಲ್ಲೊಂದು ಸೋಜಿಗದ ಸಂಗತಿ ಯಾಗಿದೆ. ಆ ನಾಲ್ಕು ಕೋಟಿ ಜನರೂ ಒಂದೇ ಮನಸ್ಸಿನವರು, ಆದ್ದರಿಂದ ಪ್ರಚಂಡ ಬಲವುಳ್ಳವರಾಗಿದ್ದರು. ಅದರಂತೆಯೇ ನಲ್ವತ್ತು ಕೋಟಿ ಭಾರತೀಯರೂ ಒಂದೊಂದು ಮನಸ್ಸಿನವರು. ಈ ಕಾರಣದಿಂದಲೇ ನಮ್ಮೀಪಾಡು ಹೃದಯವಿದ್ರಾವಕವಾಗಿದೆ.

ಕ್ರಿ.ಶ. ಪೂರ್ವದ 6ನೆಯ ಶತಮಾನದಲ್ಲಿದ್ದ ಬ್ರಾಹ್ಮಣರ ಅನ್ಯಾಯದ ವಿರುದ್ಧ ಸಿಡಿದೆದ್ದು ಅವರ ವರ್ಚಸ್ಸನ್ನು ಕಿತ್ತೊಗೆಯಲೋಸುಗ ಉತ್ತರ ಹಿಂದೂ ಸ್ಥಾನದಲ್ಲಿ ಬುದ್ಧನು ಅವತರಿಸಿದಂತೆ ಕ್ರಿ. ಶ. ಹನ್ನೆರಡನೆಯ ಶತಮಾನದ ಕರ್ನಾಟಕದಲ್ಲಿ ಬಸವೇಶ್ವರನು ಉದಯವಾದನು. ಜಾತಿಯಿಂದ ಯಾವನೂ ಹೆಚ್ಚಲ್ಲ. ಹಾಗೆಯೇ ಕಡಿಮೆಯೂ ಅಲ್ಲ. ಎಲ್ಲರೂ ಒಂದೇ ಎಂಬ ತತ್ವವನ್ನು ಸಾರಿ ಜನರನ್ನುದ್ಧರಿಸಿದನು. ಶಿವಭಕ್ತಿಯಿಲ್ಲದವನು ಬ್ರಾಹ್ಮಣನಿರಲಿ, ಯಾವ ವರ್ಣದವನೇ ಆಗಿರಲಿ ಅವನು ಕಡಿಮೆಯವನು, ಶಿವಭಕ್ತಿಯುತನು ಎಂತಹ ಕೀಳು ಜಾತಿಯಾದವನಾದರೂ ಮೇಲು ಆತನೇ ಕುಲಜನು ಎಂದು ಶಿವ ಧರ್ಮಶಾಸ್ತ್ರದ ಕಟ್ಟಳೆಯನ್ನು ಸಮಾಜದಲ್ಲಿ ಪ್ರಚಾರಗೊಳಿಸಿದನು. ಈ ಮಾದರಿಯ ರಾಷ್ಟ್ರೋದ್ಧಾರ ಕಾರ್ಯವನ್ನೇ ಕ್ರಿ.ಶ. 16ನೇ ಶತಮಾನದಲ್ಲಿ ಮತ್ತು ಅನಂತರ ರಮಾನಂದ, ಕಬೀರ, ಚೈತನ್ಯ ಮೊದಲಾದ ವೈಷ್ಣವ ಸಾಧು-ಸಂತರು ಉತ್ತರ ಹಿಂದೂ ಸ್ಥಾನದಲ್ಲಿ ಅವತರಿಸಿ ವೈದಿಕ ಕಾಲದ ಸನಾತನ ಧರ್ಮಪತಾಕೆಯನ್ನು ಎತ್ತಿ ಹಿಡಿದು ಜನರಲ್ಲಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಿದರು. ಬಸವೇಶ್ವರನು ಕೇವಲ ಭಕ್ತಿಯನ್ನು ವಹಿಸಿ ಉಳಿದ ಶಿವಭಕ್ತರನ್ನು ಗುರು, ಲಿಂಗ, ಜಂಗಮ ಸ್ವರೂಪವೆಂದು ತಿಳಿದು ಅದರಂತೆ ನಡೆದುಕೊಂಡನು. ಆತನ ಕಾಲದಿಂದ ಗುರು ಜಂಗಮರ ಸಂಖ್ಯೆಯು ಬೆಳೆಯುತ್ತಾ ಬಂತು. ಆಗ ವೀರಶೈವರಲ್ಲಿ ಜಾತಿ ಭೇದ ಕಲ್ಪನೆಯು ಎಳ್ಳಷ್ಟೂ ಇರಲಿಲ್ಲ. ಅನಂತರ ಗುರು ಜಂಗಮರು ಭಕ್ತರಿಂದ ಪರಿಪೋಷಿತರಾಗಿ ತಾವು ಸಮಾಜದಲ್ಲಿ ಮಾಡತಕ್ಕ ಧರ್ಮಭೋದನೆಯನ್ನೂ ಮಾಡದೆ ಸುಖ ಪಡುವವರಾಗಿ ಸಮಾಜದಲ್ಲಿ ಮೆರೆಯ ಹತ್ತಿದರು ಮತ್ತು ಭಕ್ತರು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟ ಮಠಗಳನ್ನು ಮಠಗಳಲ್ಲಿ ಧರ್ಮಬೋಧೆಯು ನಿರಾತಂಕವಾಗಿ ನಡೆಯಲೋಸುಗ ಬಿಟ್ಟಿಕೊಟ್ಟಿದ್ದಂಥಾ ಧನ-

ಕನಕ ಸ್ವತ್ತನ್ನೂ ಉಪಭೋಗಿಸುತ್ತಾ ಸಮಾಜದವರ ಭೀತಿಯಿಲ್ಲದೆ ಯಥೇಷ್ಟಾಚಾರಿಗಳಾಗಿ ಉಂಡ ಮನೆಗೆ ಜಂತೆ ಎಣಿಸುವವರಂತೆ ತಾವು ಹೆಚ್ಚಿನ ಕುಲದವರು ಭಕ್ತರಾದ ನೀವು ಕಡಿಮೆ ಕುಲದವರೆಂದು ಆಡಿಕೊಳ್ಳುವ "ಶರ್ಮ" ವರ್ಗವೂ ವಿರಕ್ತ ವರ್ಗವೂ ಕಂಗೊಳಿಸಹತ್ತಿದ್ದಾರೆ. ಈ ಜನರು ಹೆಸರಿಗೆ ಗುರುಗಳೂ ವಿರಕ್ತರಾಗಿ, ಗುರು ವಿರಕ್ತರಲ್ಲಿರಬೇಕಾದ ಯಾವ ವಿದ್ಯೆಯಾಗಲಿ; ಆಚಾರ ಇಲ್ಲದೆ ಕೊಬ್ಬಿ ಮೆರೆಯುತ್ತಿದ್ದಾರೆ. ಇಂಥ ನಾಮಧಾರಿಗಳ ಸಂಖ್ಯೆಯೇ ದಿನಾಲು ಬೆಳೆಯಹತ್ತಿದೆ. ಈ ನಾಮಧಾರಿಗಳ ಸಂಖ್ಯೆಯನ್ನು ಕಡಿಮೆ ಮಾಡದ ಹೊರತು ಸಮಾಜದಲ್ಲಿ ಸುಖ ಶಾಂತಿಗಳುಂಟಾಗಲಾರವು. ಹಿಂದಕ್ಕೆ ಯುರೋಪು ಖಂಡದಲ್ಲಿ ಪಾದ್ರಿಗಳ ಸಂಖ್ಯೆಯು ಈ ನಮ್ಮ ಗುರುವಿರಕ್ತರ ಸಂಖ್ಯೆಯಂತೆಯೇ ಹೆಚ್ಚಾಗಿ ಇದ್ದದ್ದರಿಂದ ಪೂರೈಕೆಗಿಂತ ಬೇಡಿಕೆ ಹೆಚ್ಚಾಗಿ ಅನೇಕ ಪಾದ್ರಿಗಳು ಹಾಡು ಹಗಲೇ ಹಾದಿಯ ಮೇಲೆ ನಿಂತು ಏನೂ ನಾಚಿಕೆಯಿಲ್ಲದೆ ಜನರಲ್ಲಿದ್ದದ್ದನ್ನು ದೋಚಿ ಅಪಹರಿಸುತ್ತಿದ್ದರು. ಅವರಿಗೆ ಸ್ವಲ್ಪವು ನಾಚಿಕೆಯಿರಲಿಲ್ಲ. ಹೀಗೆ ಜಬರಿಸಿ ಕೆಳವು ಮಾಡಿ ಜೀವಿಸಲಿಕ್ಕೆ ಹೇಸುತ್ತಿರಲಿಲ್ಲ ಮತ್ತು ಇವರು ಬಂದು ಹೊಕ್ಕ ಮನೆಯ ಹೆಣ್ಣುಮಕ್ಕಳೂ ಮಾನ ಉಳಿಸಿಕೊಳ್ಳಲು ದುಸ್ತರವಾಗಿತ್ತು. ಇಂತಹ ವಿಪತ್ತನ್ನು ಮಾರ್ಟಿನ್ ಲೂಥರನಂಥ ಧೈರ್ಯಶಾಲಿ ಒಕ್ಕಲಿಗನ ಮಗನು, ತಡೆದು ಬಗ್ಗು ಬಡಿದು ಯುರೋಪದಲ್ಲಿ ಇವರ ಸಂಖ್ಯೆಯನ್ನು ಮಿತಿಯಲ್ಲಿರಿಸಿದನು. ಹೀಗೆಯೇ ಗುರು ಜಂಗಮರೆನಿಸಿಕೊಂಡವರು ಬಹಳವಾಗಿಯೂ ಯುರೋಪದ ಪಾದ್ರಿಗಳಂತೆ ಕರ್ತವ್ಯ ಹೀನರಾಗಿದ್ದು ತಾವೇ ಹೆಚ್ಚಿನ ವರ್ಣದವರೆಂದು ದರ್ಪದಿಂದ ಆಡುವುದೂ ಬರೆದುಕೊಳ್ಳುವುದು ಹೆಚ್ಚಾದ್ದರಿಂದಲೂ ಪುರಾತನ ವೀರಶೈವರಾದ ನೊಣಬರ ಮೇಲೆ ಕೋರ್ಟಿನಲ್ಲಿ ದಾವೆ ಹೂಡಿ ಮುಖಭಂಗಿತರಾದ್ದರಿಂದಲೂ ಇವರ ಮಾತಿಗೆ ವೀರಶೈವ ಧರ್ಮಶಾಸ್ತ್ರದಲ್ಲಿ ಏನೂ ಆಧಾರವಿಲ್ಲದ್ದರಿಂದಲೂ ನಾನು ಏನೆನೊಂದು ವೀರಶೈವರಲ್ಲಿ ಧಾರ್ಮಿಕ ಜಾಗ್ರುತೆಯನ್ನು ಹುಟ್ಟಿಸಲೋಸುಗ ಈ ಪುಸ್ತಕವನ್ನು ಬರೆದುದಾಯಿತು. ಈ ಪುಸ್ತಕದ ಪ್ರಥಮಾವೃತ್ತಿಯು ಹುಬ್ಬಳ್ಳಿಯಲ್ಲಿ ಸ್ಥಾಪಿತವಾದ ಶ್ರೀಮದ್ ಬಸವಾದಿ ಪ್ರಪ್ರಥಮ ಮಾರ್ಗ ಪ್ರಚಾರಿಣೀ ಸಭೆಯಿಂದ ಪ್ರಸಿದ್ಧ ಮಾಡಲ್ಪಟ್ಟಿತು. ಅದರ ಎಲ್ಲಾ ಪ್ರತಿಗಳೂ ಬೇಗನೇ ಖರ್ಚಾದ್ದರಿಂದಲೂ ಮತ್ತು ಅನೇಕ ವೀರಶೈವರು ಗ್ರಂಥಗಳನ್ನು ವಿ.ಪಿ. ಮೂಲಕ ಕಳಿಸಿಕೊಡ-

ಬೇಕೆಂದು ಪತ್ರಗಳು ಬರೆದ ಕಾರಣದಿಂದಲೂ ಈ ಶರ್ಮ ವರ್ಗದ ಮುಖ್ಯ ನಾಲಿಗೆಯುಂತಿದ್ದು ಪಂಚಾಚಾರ್ಯ ಪ್ರಭಾವದಲ್ಲಿ ವೀರಶೈವರಲ್ಲಿ ನಾಲ್ಕು ವರ್ಣಗಳಿರುತ್ತವೆಂಬುದಾಗಿ ಅಜ್ಞ ವೀರಶೈವರನ್ನು ಮೋಸಗೊಳಿಸುವ ಲೇಖನಗಳನ್ನು ಬರೆದಿದ್ದುದರಿಂದಲೂ ಅವೆಲ್ಲವನ್ನು ಸಪ್ರಮಾಣವಾಗಿ ಖಂಡಿಸುವ ಯತ್ನವನ್ನು "ವೀರಶೈವರಲ್ಲಿ ಜಾತಿ ಭೇದಗಳಿಲ್ಲ" ಎಂಬ ಚಿಕ್ಕ ಹೊತ್ತಿಗೆ ಹೊರತಂದಿದ್ದೇನೆ ಆದ್ದರಿಂದ ಸರ್ವ ವೀರಶೈವರೂ ಇದರಲ್ಲಿ ಅಡಕವಾಗಿರುವ ಶಿವಾಗಮಗಳ, ಶಿವ ಧರ್ಮಶಾಸ್ತ್ರಗಳ ವೀರಶೈವ ಶರಣರ, ಶಿವ ಕವಿಗಳ ಮತ್ತು ಶಿವಯೋಗಿಗಳ ಸಂಸ್ಕೃತ ಮತ್ತು ಕನ್ನಡದ ಆಧಾರಗಳನ್ನು ಪರಾ-ಮರ್ಶಿಸಿ ಸತ್ಯ ಮಾರ್ಗವನ್ನು ಕಂಡುಹಿಡಿಯಲೆಂಬ ಸದಿಚ್ಛೆಯಿಂದ ಇದರ ಎರಡನೇ ಆವೃತ್ತಿಯನ್ನು ಹೆಚ್ಚಿನ ಪ್ರಮಾಣಗಳನ್ನು ಕೂಡಿಸಿ ತೆಗೆದಿರುವೆನು ಸರ್ವ ವೀರಶೈವ ಆಬಾಲ ವೃದ್ಧರೂ ಇದನ್ನು ಓದಿ ವೀರಶೈವ ಸಮಾಜ ಕಂಟಕಪ್ರಾಯರಾದ ಈಗಿನ ಗುರು ವಿರಕ್ತರ ತಪ್ಪು ಹಾದಿಯನ್ನು ಮೆಟ್ಟ-ಬಾರದೆಂದು ಇದರ ಬೆಲೆಯನ್ನು ತೀರಾ ಕಡಿಮೆ ಮಾಡಿರುತ್ತೆ. ಶ್ರೀಮಂತರು ಬಡವರು ಕೊಂಡು ಓದಿ ಇದರ ಲಾಭ ಪಡೆದುಕೊಳ್ಳಬೇಕೆಂದು ಹಾರೈಸುತ್ತೇನೆ. ಅಲ್ಲದೆ ಈ ಪುಸ್ತಕದಲ್ಲಿ ನೊಣಬ ವೀರಶೈವರ ಮೇಲೆ ಪಂಚಮಸಾಲಿ ವೀರಶೈವರು ಹಾವೇರಿ ಕೋರ್ಟಿನಲ್ಲಿ ಹೂಡಿದ್ದ ದಾವೆ ಮತ್ತು ತೀರ್ಪುವಾದ ವಿವಾದಗಳನ್ನೆಲ್ಲಾ ಸಂಕ್ಷಿಪ್ತವಾಗಿ ಬರೆದಿರುತ್ತೇನೆ. ಈ ಪುಸ್ತಕ ಹೊರ ಬರಲು ಕೋರ್ಟಿನ ಕಟ್ಟೆಯೇ ಕಾರಣ.

ಇತಿ ಶಿವಶರಣ ಸೇವಕ

ಹುಬ್ಬಳ್ಳಿ, ವೀರಪ್ಪ, ಬಸಪ್ಪ ಬಿಳಿ ಅಂಗಡಿ,

ತಾ॥ 8-10-1928 ಬಿ.ಎ., ಎಲ್‌ಎಲ್.ಬಿ , ವಕೀಲರು.

ಈ ಪುಸ್ತಕವನ್ನು ಜಿ.ಎನ್. ಗಿಣಿಮಾವು ಇವರು ತಮ್ಮ ದಿ ನ್ಯೂ ಪ್ರಿಂಟಿಂಗ್ ವರ್ಕ್ಸ್ ಹುಬ್ಬಳ್ಳಿಯಲ್ಲಿ ಪ್ರಸಿದ್ಧಿ ಪಡಿಸಿದರು.

ಇವರು ಪ್ರಸಿದ್ಧಿ ಪಡಿಸಿರುವ ಈ ಪವಿತ್ರ ಗ್ರಂಥದಲ್ಲಿ ವೀರಶೈವರಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳೂ ಮತ್ತು ಇಡೀ ಹಾವೇರಿ ಕೋರ್ಟಿನಲ್ಲಾದ ವಾದ-ವಿವಾದವೆಲ್ಲಾ ಕೂಲಂಕಷವಾಗಿ ತಿಳಿಯಬಹುದಾಗಿದೆ. ಈ ಗ್ರಂಥವನ್ನು ನಾನು ಇದುವರೆಗೂ ನೋಡಿರಲಿಲ್ಲ. ನಾನು ಇದನ್ನು ಈ ನೊಳಂಬ

ವೀರಶೈವ ಇತಿಹಾಸ ದರ್ಪಣ ಬರೆಯುವಾಗ ಇದಕ್ಕೆ ಸೇರಿಸಲು ನನ್ನ ಹತ್ತಿರ ವೀರಶೈವರಲ್ಲಿ ಜಾತಿ ಭೇದಗಳಿಲ್ಲ ಎಂಬ ಗ್ರಂಥವಿದೆ ತೆಗೆದುಕೊಳ್ಳಿರೆಂದು ನನ್ನನ್ನು ಮಲ್ಲಿಗೆರೆ ಮೈಸೂರಪ್ಪನಪಾಳ್ಯದ ಶರಣ ಸದ್ಭಕ್ತರಾದ ರಿ॥ ಸ್ಕೂ॥ ಮಾ॥ ಎಂ. ಮಲ್ಲಪ್ಪ ಮಾಸ್ತರರು ಹೃದಯತುಂಬಿ ಬಂದು ನನಗೆ ಕೊಟ್ಟರು ನಾನು ಅವರಿಗೆ ಚಿರಋಣಿಯಾಗಿದ್ದೇನೆ. ಈ ಹಳೇ ಗ್ರಂಥವು ಈಗ ಹಾಲಿ ನನ್ನ ಬಳಿಯಿದೆ. ಈ ಹಿಂದೆ ನಾನು ಹೆಂಜೇರು ಹೇಮಾವತಿಯಲ್ಲಿರುವ ಯಜ್ಞಾರೀಶ್ವರ ಅಂದರೆ ವೀರಭದ್ರನು ಮತ್ತು (ನೊಳಂಬೇಶ್ವರನು) ನೊಣಂಬೇಶ್ವರನು ನೊಳಂಬ ಲಿಂಗಾಯುತರ ಮನೆ ದೇವರೆಂದೆನು ತಾನೇ? ಮುಂದೆ ಓದಿ. ಈಗ ವೆಂಕಟಗಿರಿ ವೆಂಕಟಾಚಲ ಅಥವಾ ತಿರುಪತಿಯೆಂದು ಕರೆಯುತ್ತಿರುವ ಪರ್ವತವು ಹಿಂದೆ ಭದ್ರಗಿರಿ, ಭದ್ರಾಚಲವೆಂದು ಪ್ರಸಿದ್ಧ ವಾಗಿದ್ದು ಅದು ವೀರಭದ್ರನ ಬೆಟ್ಟವಾಗಿತ್ತು.

ನೊಳಂಬರಾಜ ಸಂತತಿಯ ದೊರೆಗಳ ಬಂಧು ಶಿವಪ್ಪಗೌಡನ ಮನೆ ದೇವರು, ಅಲ್ಲದೆ ಹಿಂದಿನಿಂದಲೂ ಅರ್ಚಕರೂ ಆ ಮನೆತನದವರೇ ಆಗಿದ್ದರು ಹೀಗಿದ್ದು ದೊಡ್ಡ ಮನೆತನದ ಆ ಶಿವಪ್ಪಗೌಡನಿಗೆ ಮಕ್ಕಳ ವಿದ್ಯಾಭ್ಯಾಸ ಮತ್ತು ದೇವರ ಪೂಜೆಗೆ ಒಬ್ಬರು ಅಯ್ಯನವರನ್ನು ಕರೆತಂದು ಇಟ್ಟು ಕೊಳ್ಳಲು ಮನಸ್ಸಾಯಿತು. ಅಂತಹ ಅಯ್ಯಗಳು ಸಿಗಬೇಕಾದರೆ ಮೈಸೂರು ಸೀಮೆಯಲ್ಲಿಯೇ ಸರಿ, ಇನ್ನೆಲ್ಲೂ ಸಿಗಲಾರರೆಂದು ತಿಳಿದು ನೊಳಂಬ ಲಿಂಗಾ ಯಿತರ ನೆಲೆವೀಡಾಗಿದ್ದ ಮೈಸೂರು ಸೀಮೆ ಕಡೆ ಬರುವಾಗ ಒಂದು ದಿನ ಸಾಯಂಕಾಲ ಒಂದು ಹಳ್ಳಿಯ ದೇವಾಲಯದಲ್ಲಿ ತಂಗಿದ್ದನು. ಅದೇ ದಿನ ಅಲ್ಲಿಗೆ ಮೊದಲು ಬಂದು ತಂಗಿದ್ದ ಓರ್ವ ಐಯ್ಯನವರ ಭೇಟಿಯಾಯ್ತು, ಪರಿಚಯವೂ ಆಯ್ತು. ಅವರು ಮೈಸೂರಿನ ಹತ್ತಿರ ಮೇಲುಕೋಟೆಯವರು ಅಂದರೆ ಅವರರ್ಥ ನಿಮಗೆ ಗೊತ್ತಿಲ್ಲ? ನಾನೇಕೆ ವಿವರಿಸಲಿ. ಆಗ ಗೌಡರು ತಾವು ಬಂದ ವಿಚಾರ ತಿಳಿಸಿದರು. ಹಾಗೇಯೇ ಅಯ್ಯನವರೂ ಅವರವಿಚಾರ ತಿಳಿಸಿದಾಗ ಗೌಡರು ನಮ್ಮಿಬ್ಬರ ಸಮಾಗಮದಿಂದ ಇಬ್ಬರಿಗೂ ಒಳ್ಳೆಯದೇ ಆಯ್ತು ಎಲ್ಲಾ ವೀರೇಶನ ಇಚ್ಛೆ ಎಂದರು. ಆ ಕೂಡಲೇ ಅಯ್ಯನವರೂ ಇದೆಲ್ಲಾ ಶಿವನಿಚ್ಛೆ ಎಂದರು. ಯಾವಾಗ ಅಯ್ಯನವರು ಶಿವನಿಚ್ಛೆ ಎಂದರೋ ಆಗಲೇ ಗೌಡರಿಗೆ ಇವರಲ್ಲಿ ಭೇದಭಾವವಿಲ್ಲವೆಂದು ತಿಳಿದು ಅಯ್ಯನವರೂ ಸಮೇತ ಭದ್ರಾಚಲಕ್ಕೆ ಬಂದರು. ಅಯ್ಯನವರಿಗೆ ಸಂಭಾವನೆ ವರ್ಷಕ್ಕೆ

ಇಷ್ಟೆಂದು ತೀರ್ಮಾನವಾಯಿತ್ತು. ದೇವರ ಪೂಜೆ ಮಕ್ಕಳ ವಿದ್ಯಾಭ್ಯಾಸ ಸಲೀಸಾಗಿ ನಡೆಯುತ್ತಿತ್ತು. ಹೀಗೆ ಒಂದೆರಡು ವರ್ಷ ಕಳೆದ ನಂತರ ಅಯ್ಯ ನವರು ಗೌಡರನ್ನು ಕುರಿತು, ನಾನು ಒಬ್ಬಂಟಿಗ, ನನ್ನ ಲಗ್ನವಾದರೆ ನನ್ನ ನೆರವಿಗೆ ಪತ್ನಿಯಿದ್ದಂತಾಗುತ್ತದೆ. ನೆಮ್ಮದಿ ಸಿಗುತ್ತದೆ ಎಂದಾಗ ಗೌಡರು ಆಗಬಹುದು. ಒಂದು ಕನ್ಯೆಯನ್ನು ತಾವೇ ನೋಡಿರಿ, ವಿವಾಹ ಕಾರ್ಯವಾಡಿ ಮುಗಿಸೋಣ ಎಂದರು. ಆಗ ಅಯ್ಯನವರು ಅವರ ತೌರೂರು ಮೇಲು-ಕೋಟೆಯಲ್ಲಿ ಬಂಧು-ವರ್ಗದಲ್ಲಿ ಕನ್ಯೆಯನ್ನು ನಿಶ್ಚಯಿಸಿದರು. ಗೌಡರು ಸಂತೋಷದಿಂದ ಸಾಂಗವಾಗಿ ವಿವಾಹ ನಡೆಸಿದರು. ಈ ನವ ದಂಪತಿಗಳ ಜೊತೆಗೆ ವಧುವಿನ ಸಂಗಡ ಓರ್ವ ಬಳ್ಳಿಳ್ಳಿ ಕನ್ಯೆಯೂ ಬಂದಾಯಿತ್ತು. ಮತ್ತೆರಡು ವರ್ಷ ಕಳೆಯುವುದರೊಳಗಾಗಿ ಬಳ್ಳಿಳ್ಳಿಗೊಂದು ಗಂಡು, ಮತ್ತೆ ಬಳ್ಳುಳ್ಳಿ ಹೀಗೆ ಎಂಟತ್ತು ಜನದ ಸಂಸಾರ ಆಗುವುದರೊಳಗಾಗಿ ಇವರದೇ ಒಂದು ದೊಡ್ಡ ಗುಂಪಾಯಿತ್ತು. ಮುಗ್ಧರಾದ ಗೌಡರು ಅಯ್ಯ ನವರನ್ನು ನಂಬಿ ಅವರ ಮೇಲೆ ನಿಗಾ ಇಡಲಿಲ್ಲ. ಶಾಲೆಯಲ್ಲಿ ಮತ್ತು ದೇವಾಲಯದಲ್ಲಿ ಓಂ ನಮಃ ಶಿವಾಯಕ್ಕೆ ಬದಲಾಗಿ ತಿರುನಾರಾಯಣ-ವಾಯಿತ್ತು. ವೀರಭದ್ರೇಶನಿಗೆ ಪಂಗನಾಮವೂ ಬಿತ್ತು. ಮುಗ್ಧ ಜೀವೀ-ಗೌಡರು ಮುಂದೆ ಒಂದೊಂದು ಮೆಟ್ಟಿಲಿಳಿಯ ತೊಡಗಿದರು. ಅರ್ಚಕರ ಗುಂಪು ದೊಡ್ಡದಾಗುತ್ತಾ ಹೋಯಿತ್ತು. ಗೌಡನು ತನ್ನ ಮನೆ ದೇವರ ಪೂಜೆ ಎಂದು ಬಿಟ್ಟನೋ ಅಂದಿನಿಂದಲೇ ಅವನ ಕೈ ಸೋಲಾಗುತ್ತಾ ಬಂತು. ಇದ್ದದ್ದೆಲ್ಲಾ ಕಣ್ಮರೆಯಾಗುತ್ತಾ ಹೋಯಿತ್ತು. ಕೊನೆಗೆ ಭಿಕಾರಿಯಾಗಿ ಒಂದು ದಿನ ತನ್ನ ಅಂತ್ಯ ಯಾತ್ರೆ ಮುಗಿಸಿದನು. ಅಳಿದುಳಿದವರು ನೆಂಟ-ರಿಷ್ಟರ ಮನೆ ಸೇರಿದರು ಆಯಿತ್ತು ಅಧ್ಯಾಯ ಮುಗಿಯಿತು. ಇನ್ನು ಅರ್ಚಕ ರಿಗೆ ಬಲ ಬಂದಿತು. ಅವರ ಕೆಲ ನೆಂಟರಿಷ್ಟರೂ ಬಂದು ನೆಲೆಸಿದರು. ಮುಂದೆ ಸೋಮ ಮಂಗಳವಾರಗಳ ಪೂಜೆಯು ಶನಿವಾರಕ್ಕೆ ಬಂದು ನಿಂತಿತು. ವೀರ ಭದ್ರನು ಹಣೆಗಣ್ಣಯ್ಯಯ್ಯ. ಕಿಡಿಗಣ್ಣ, ಅವನ ಫಾಲನೇತ್ರವನ್ನು ಪ್ರತಿನಿತ್ಯ ಚಂದನಾದಿ, ಶ್ರೀಗಂಧಗಳಿಂದ ಮುಚ್ಚಿ ಪಂಗನಾಮ ಮಾಡಿದರು. ತ್ರಿಪುಂಡ್ರ ಹೋಗಿ ಊರ್ಧ್ವಪುಂಡ್ರವಾಯಿತ್ತು. ಜಟಾಮುಕುಟ ಮುಚ್ಚಲು ನವರತ್ನ ಖಚಿತ ಕಿರೀಟ ಧರಿಸಿದರು. ಕಿರೀಟ ನಾಮದ ಮಧ್ಯೆ ಹಣೆಗಣ್ಣು ಕಾಣ-ದಾಯಿತ್ತು. ಹಸ್ತಗಳಲ್ಲಿದ್ದ ತ್ರಿಶೂಲ, ಸರ್ಪ ಇತ್ಯಾದಿ ಆಯುಧಗಳ,

ಕೊರಳಿನಲ್ಲಿನ ರುಂಡಮಾಲೆ, ರುದ್ರಾಕ್ಷಿಗಳೂ ಮುಚ್ಚಿ ಮಾಯವಾದವು. ಅವುಗಳ ಸ್ಥಾನದಲ್ಲಿ ಶಂಖ, ಚಕ್ರಾದಿಗಳು, ತುಳಸೀಮಣಿ ಪಚ್ಚೆ, ಪದಕ ಹಾರಗಳೂ ಮತ್ತೆ ಮತ್ತೆಸೋ ಸೇರಿ "ವೆಂಕಟಾಚಲವಾಸ ಹೇ ಶ್ರೀನಿವಾಸ" ಎಂಬಂದಾಗಿ ವಾಗ್ಗೇಯಕಾರರು, ಕವಿಗಳು ಹಾಡಿದರು.

ಶಿವನಿಗೆ ಬಾಳೆಹಣ್ಣು, ತೆಂಗಿನಕಾಯಿ, ಕಡ್ಡಿಕರ್ಪೂರ ಅರ್ಪಿತ ತಾನೆ ಬದಲಾಗಿ ಕಲ್ಲುಸಕ್ಕರೆ, ಖರ್ಜೂರದ ಪಾಕೆಟ್‌ಗಳು ಬಂದವು. ನಾರಾಯಣನಿಗೆ ತ್ರಿಕಾಲ ಪೂಜೆ ಎಲ್ಲಿಯೂ ಇಲ್ಲ. ಅಲ್ಲಿ ವೇಳೆಗೆ ಸರಿಯಾಗಿ ಈಗಲೂ ತ್ರಿಕಾಲ ಪೂಜೆ ನಡೆಯುತ್ತವೆ. ಇನ್ನು ಭಕ್ತಾದಿಗಳಿಗೆ ಸ್ವಾಮಿಯ ದರ್ಶನ ಅಸಾಧ್ಯ. ನೂರೊಂದು, ಐನೂರೊಂದು, ಸಾವಿರದೊಂದು ಕೊಟ್ಟರೆ ವಿಶೇಷ ಪೂಜೆ, ದರ್ಶನ, ಬಹು ಸುಲಭ, ದುಡ್ಡಿಲ್ಲದ ಮತ್ತೆಲ್ಲರೂ ಬೆಳಿಗ್ಗೆ ಕ್ಯೂನಲ್ಲಿ ನಿಂತು ಮುಂದೆ ಸಾಗಿದರೆ ಮಟಮಟ ಮಧ್ಯಾಹ್ನಕ್ಕೆ ಧರ್ಮದರ್ಶನ ನಾನೂ ಒಂದೆರಡು ಸಾರಿ ಯಾತ್ರೆ ಮಾಡಿದೆ ಭಕ್ತವೃಂದದ ಜೊತೆ ಜೋರಾಗಿ ಗೋವಿಂದಾ ಎನ್ನುತ್ತಾ ಒಮ್ಮೊಮ್ಮೆ ಅವರ ಬಾಯಿಂದಲೂ ಹರಹರ ಮಹಾದೇವ ಎನ್ನಿಸುತ್ತಾ ಮುಂದೆ ಸಾಗುತ್ತಿದ್ದಾಗ ಎಷ್ಟೋ ಜನ ಶರಣ ಸದ್ಭಕ್ತರು ಓಹೋ ಇವನ್ಯಾರಪ್ಪ ಈ ತ್ರಿಪುರಾರಿ ಶಂಕರ ನಾವು ಇಲ್ಲಿ ಇಂತ-ಹವನನ್ನು ಎಂದೂ ಕಂಡಿರಲಿಲ್ಲ. ಹಣೆಯಲ್ಲಿ ಮೂರೆಳೆ ವಿಭೂತಿ, ಕೊರಳಲ್ಲಿ ದಪ್ಪ ರುದ್ರಾಕ್ಷಿಸರ, ಅಡ್ಡ ಹೊದಿಕೆ ಉತ್ತರೀಯ ಧರಿಸಿದ ನನ್ನನ್ನು ನೋಡಿ ಮೈದುಂಬದವರಂತೆ ಒಮ್ಮೊಮ್ಮೆ ನನ್ನ ಬಾಯಿಂದ ಹರಹರ ಮಹಾದೇವ ಎಂಬ ನುಡಿ ಬಂದ ಕೂಡಲೇ ವೀರಭದ್ರನು ದಕ್ಷಯಾಗ ಧ್ವಂಸ ಮಾಡಿದಾಗ ಅರ್ಭಟಿಸದಂತೆ ಜೋರಾಗಿ ಹರಹರಾ ಮಹಾದೇವ ಎನ್ನುತ್ತಿದ್ದರು. ನನ್ನ ಜನ್ಮ ಸಾರ್ಥಕವಾಯ್ತು ಮರ್ಯಾದೆಯೂ ಬಂತು. ಅಂತೂ ಇಂತೂ ಸ್ವಾಮಿಯ ಹತ್ತಿರವಾಗುತ್ತಿದ್ದಂತೆ ನನ್ನ ದೃಷ್ಟಿಯೂ ನೇರ ಸ್ವಾಮಿಯ ಮೇಲೆ ಇತ್ತು. ಸಾಧ್ಯವಾದಷ್ಟು ನೋಡಿದೆ. ಊಹಿಸಿದೆ. ನನ್ನ ಮುಂದಿದ್ದವರಿಗೆಲ್ಲ ಏನಾಯ್ತೆಂಬುದು ನನಗೆ ತಿಳಿಯಲಿಲ್ಲ. ಅವರೆಲ್ಲಾ ಹೋದ ನಂತರ ನಾನು ಸ್ವಾಮಿಯ ಹತ್ತಿರದಲ್ಲೇ ಎದುರಾದೆ, ತಕ್ಷಣ ಒಂದೇ ಸೆಕೆಂಡಿನೊಳಗಾಗಿ ನನ್ನ ಕೈಲಿದ್ದ ಉತ್ತುತ್ತೆ, ದ್ರಾಕ್ಷಿ ಪೊಟ್ಟಣಗಳನ್ನು ಕಸಿದುಕೊಂಡು ಅರ್ಧ ಚಂದ್ರ ಪ್ರಯೋಗ ಅಂದರೆ ಕುತ್ತಿಗೆಗೆ ಕೈಹಾಕಿ ಹೊರಗಡೆ ತಳ್ಳಿದರು, ದರ್ಶನ ಮುಗಿಯಿತು ಮತ್ತೊಮ್ಮೆ ದೇವರ ಸ್ಥಿರೀಕರಣ ಮಾಡಿಕೊಳ್ಳಲು

ಯಾತ್ರೆ ಹೋದೆನು. ಆಗಲೂ ಹಿಂದಿನ ಸಾರಿಯಂತೆಯೇ ಸರದಿಯಲ್ಲಿ ನಿಂತು ಗೋವಿಂದ, ಹರಹರಾ ಮಹಾದೇವ ಎನ್ನುತ್ತಾ ಸಾಗಿದೆ ನನ್ನ ಮುಂದೆ ಜನರಿದ್ದಾಗಲೇ ನೇರ ದೃಷ್ಟಿ ಸ್ವಾಮಿಯ ಮೇಲೆ ಈ ಸಾರಿ ಸಂಪೂರ್ಣ ಅರ್ಥ ಮಾಡಿಕೊಂಡೆ. ಆದರೆ ಅರ್ಧಚಂದ್ರ ಪ್ರಯೋಗ ಮಾಡಿಸಿಕೊಳ್ಳಲಿಲ್ಲ. ನನ್ನ ಮುಂದಿದ್ದವರ ಹಸ್ತಕ್ಕೆ ಉತ್ತುತ್ತೆ, ದ್ರಾಕ್ಷಿ ಪ್ಯಾಕೆಟ್ಟುಗಳನ್ನು ಕೊಟ್ಟು ಪಕ್ಕಕ್ಕೆ ಸರಿದು ಹೊರಬಂದೆ ಇಷ್ಟೆಲ್ಲಾ ಪ್ರಯಾಸಪಟ್ಟು ಯಾತ್ರೆ ಮಾಡಲು ಕಾರಣರು ನಮ್ಮ ತಾತನವರು, ಅಂದರೆ ಮಡೆನೂರು ಭಾಗವತ ಹೊನ್ನಪ್ಪ ನವರು, ಅವರು ನನ್ನನ್ನು ಗುರುವೇ ಎನ್ನುತ್ತಿದ್ದರು. ನಾನೂ ಮಮತೆ ಯಿಂದ ತಾತ ಎನ್ನುತ್ತಿದ್ದೆನು. ಇಲ್ಲಿ ಶಿವಪ್ಪಗೌಡನು ನಾಮಾವಶೇಷವಾಗಲು ಕಾರಣ ತಾವಾಳ್ವ ಶೌಚಾವನು ತಾನುಂಭ ಊಟವನು ತಾವಾಳ್ವ ರತಿಸುಖವ ಮತ್ತೆಯಾರಾದರೂ ಮಾಡಿದರೆ ತನಗೆ ತೃಪ್ತಿಯಾಗುತ್ತದೆಯೇ ಹಾಗೆಯೇ ಗೌಡರು ತನ್ನ ಮನೆ ದೇವರ ಪೂಜೆಯನ್ನು ಬಿಟ್ಟಿದ್ದರಿಂದ ಆತನು ನಾಶ ವಾದನು. ಅರ್ಚಕನು ಭಕ್ತಿಯಿಂದ ದೇವರ ಪೂಜೆ ಮಾಡಿದ್ದರಿಂದ ಉದ್ಧಾರ ವಾದನು. ಇದರಲ್ಲಿ ತಪ್ಪೇನಿದೆ. ಏಕೋ ದೇವಃ ಕೇಶವೋವಾ ಶಿವೋವಾ ದೇವನೊಬ್ಬ ನಾಮ ಹಲವು, ಒಬ್ಬನೇ ದೇವರು, ಒಬ್ಬ ಶಿವ ಎಂದರೆ ಮತ್ತೊಬ್ಬ ಕೇಶವ ಎನ್ನುತ್ತಾನೆ ನೋಡಿ, ಕನ್ನಡದಲ್ಲಿ ನೀರು, ಹಿಂದಿಯಲ್ಲಿ ಪಾನಿ, ಇಂಗ್ಲೀಷಿನಲ್ಲಿವಾಟರ್ ಎನ್ನುತ್ತೇವೆ, ಇವುಗಳ ಅರ್ಥ ಒಂದೆ. ಶನಿವಾರವಾದರೇನು? ಸೋಮ, ಮಂಗಳವಾರವಾದರೇನು? ಎಲ್ಲಾ ಏಳು ವಾರಗಳೂ ಒಳ್ಳೆಯವೆ. ಇದರಲ್ಲಿ ಎಂತಹ ಭೇದ, ಮಂಗಳವಾರ ವೀರಭದ್ರನ ವಾರ ಎನ್ನುತ್ತಾರೆ. ಶನಿವಾರ ನಾರಾಯಣ, ಸೋಮವಾರ ಶಿವನ ವಾರ ಎನ್ನುತ್ತಾರೆ. ಈ ನೊಳಂಬ ಲಿಂಗಾಯಿತ ಮನೆ ದೇವರು ವೀರಭದ್ರನು. ನಮ್ಮ ಕರ್ನಾಟಕದಲ್ಲಿ ಈ ಸ್ವಾಮಿಯ ಭಕ್ತರು ಬಹಳಷ್ಟು ಜನರಿದ್ದಾರೆ. ಅವರೆಲ್ಲರೂ ಶನಿವಾರ ನಾರಾಯಣ, ಭಾನುವಾರ ಭೈರವ, ಸೋಮವಾರ ಶಿವ, ಮಂಗಳವಾರ ವೀರಭದ್ರ, ಈ ಎಲ್ಲಾ ದೇವರ ದೀಪಗಳನ್ನು ಸೋಮ ವಾರವೇ ಹಚ್ಚಿ ಪೂಜಿಸುತ್ತಾರೆ. ಶನಿವಾರ, ಸೋಮವಾರ, ಮೂರು ನಾಲ್ಕು ಇವೆಲ್ಲಾ ಏನು. ಇವಕ್ಕೇನಾದರೂ ಅರ್ಥ ವಿದೆಯೆ, ಸರ್ಕಾರ ನಡೆ ಸುವವರು ಓಟಿನ ಆಸೆಯಿಂದ ಜನಾಂಗವನ್ನು ಒಡೆದು ಆಳುವ ರೀತಿ ಈ ಹಿಂದೆ ಯಾವನೋ ಐದನೆಯವನು ಈ ನೊಳಂಬ ವೀರಶೈವರನ್ನು ಒಡೆದು

ಇಬ್ಬಾಗ ಮಾಡಿ ಈಗಕ್ಕ ಗೂಬಕ್ಕನ ಕಥೆಕಟ್ಟಿ, ಮೂರು ನಾಲ್ಕು ಎಂದು ಪ್ರಚಾರ ಮಾಡಿ, ಅವರಲ್ಲಿ ಒಂದು ಪಂಗಡದವರಿಗೆ ನಿಮ್ಮಲ್ಲಿ ಗುರುಜಂಗಮ ರಿಲ್ಲ ನಾವೇ ನಿಮಗೆ ಹಮ್ಮಕಮ್ಮ ತೀರಿಸುವ ಐಗಳು ಎಂದು ಕೊಬ್ಬಿ ಕುಣಿದು ತಮ್ಮ ಕಟ್ಟಿ ಹೊಟ್ಟೆ ಹೊರೆದುಕೊಳ್ಳಲು ಸುಲಭೋಪಾಯ ಮಾಡಿ-ಕೊಂಡರು. ಅವರಲ್ಲಿ ಕೆಲವರು ಆ ಕೆಟ್ಟ ಐಗಳ ಮಾತಿಗೆ ಮರುಳಾಗಿ ಅವರ ಬಲೆಗೆ ಬಿದ್ದು ಕಳಚಿಕೊಳ್ಳಲು ಅಶಕ್ತರಾದರು. ಈಗೀಗ ವಿದ್ಯಾಬುದ್ಧಿ ವಿವೇಚನೆಹೊಂದಿ ಅವರನ್ನು ತುಚ್ಛೀಕರಿಸಿ ಆ ನೊಳಂಬ ಸಹೋದರರೆಲ್ಲಾ ಒಂದಾಗಿ ಸಮಬಾಳು ಬಾಳುತ್ತಾ ಐಕ್ಯದಿಂದಿದ್ದಾರೆ. ಈ ಹಿಂದೆ ಆ ನೊಳಂಬ ಸಹೋದರರ ಮೇಲೆ ಕಟ್ಟಿದ ಕಲ್ಪನಾ ಕಥೆಯನ್ನು ಕೇಳಿ ಓದಿ ನೋಡಿ. ಆಗ ನಿಮಗೆ ಎಲ್ಲಾ ಮನನವಾಗುತ್ತದೆ.

ಆದಿಯಲ್ಲಿ ಈ ನೊಳಂಬ ವೀರಶೈವರಲ್ಲಿ ಓರ್ವ ತಾಯಿಗೆ ನಾಲ್ವರು ಮಕ್ಕಳಿದ್ದರಂತೆ, ಅವರು ವ್ಯವಸಾಯಗಾರರ ಕುಟುಂಬದವರಂತೆ, ಒಂದು ದಿನ ಅವರು ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಅವರ ತಾಯಿಯು ಬುತ್ತಿ ತಂದಳಂತೆ ಅವರಲ್ಲಿ ಇಬ್ಬರು ಮುಂದಾಗಿ ಊಟಕ್ಕೆ ಬಂದಾಗ ಅವರಿಗೆ ತಾಯಿ ನೀಡಿದಳಂತೆ, ಕೂಡಲೇ ತವರ ತಟ್ಟೆಯಿಂದ ಒಂದಂಗಳು ಅನ್ನವನ್ನು ಒಂದು ನೊಣ ಕಚ್ಚಿಕೊಂಡು ಓಡಿತಂತೆ, ಆ ಕೂಡಲೇ ಅವರೀರ್ವರೂ ಬೆನ್ನಾಡಿ ಹೋದರಂತೆ, ಆಮೇಲೆ ಊಟಕ್ಕೆ ಬಂದಿದ್ದ ಮತ್ತಿಬ್ಬರು ಸಹೋದರರು ಈ ಸುದ್ದಿ ಕೇಳಿ ತಾವೂ ಊಟ ಮಾಡದೆ ನೊಣ ಹುಡುಕಿಕೊಂಡು ಹೋದರಂತೆ ಮೊದಲು ಹೋದ ಸಹೋದರರು ಸುಸ್ತಾಗಿ ಮೂರು ದಿನಕ್ಕೆ ಬಂದರಂತೆ, ಕೊನೆಗೆ ಹೋದವರು ಅನ್ನದ ಅಗಳು ಸಮೇತ ನಾಲ್ಕು ದಿನಕ್ಕೆ ಬಂದು, ತಮ್ಮನ್ನು ಬಿಟ್ಟು ಮೊದಲೇ ಬಂದ ಹಿರಿಯ ಸಹೋದರರ ಮೇಲೆ ವ್ಯಾಜ್ಯ ತೆಗೆದರಂತೆ, ಅಂದಿನಿಂದ ವೈಷಮ್ಯ ಬೆಳೆದು ಇಬ್ಬಾಗ ಮೂರು ನಾಲ್ಕು ಎಂದು ಭೇದ ಮಾಡಿಕೊಂಡರಂತೆ, ಇದೇನಿದು ಅಂತೆಕಂತೆ. ಮುದುಕಿಯರು ಮಕ್ಕಳಿಗೇಳುವ ಗುಬ್ಬಕ್ಕನ ಕಥೆಯಂತೆ. ಈಗ ಓದಿ ಇವರ ನಿಜಾಂಶವ ಇತಿ-ಹಾಸ ಕಥೆಯನ್ನು ಪರಮೇಶ್ವರನ ಹಣೆಗಣ್ಣಿನಿಂದ ಹುಟ್ಟಿದ ವೀರೇಶನ ಅಂಶೀಕ ಪ್ರಪ್ರಥಮನಾದವ, ತ್ರಿಲೋಚನ ಅಥವಾ ತ್ರಿಣಯನನು.

ಈ ತ್ರಿಣಯನನ ವಂಶೀಕರೇ ಈಗಿನ ನೊಳಂಬ ವೀರಶೈವರು ಇವರಲ್ಲಿ ಗುರುಮನೆಗೂ, ಮತ್ತೆ ಕೆಲವರು ಅರಮನೆಗೂ ಸೇರಿದರು. ಕ್ರಿ. ಶ. ಆರು

ನೂರರಲ್ಲಿಯೇ ನೊಳಂಬವಾಡಿ ರಾಜ್ಯ ಕಟ್ಟಿ, ರಾಜಾಧಿರಾಜರಾಗಿ, ಮಹಾ ಮಂಡಲಾಧೀಶರಾಗಿ, ಮಹಾನಾಡು ಪ್ರಭುಗಳಾಗಿ, ಕಟ್ಟೆಯ ಯಜಮಾನರಾಗಿ ಆಳಿದರು. ಈಗ ಇವರಲ್ಲಿ ಕೆಲವರ ಹೆಸರುಗಳನ್ನು ನೋಡಿ, ಸಿಂಹ-ವರ್ಮ, ಮಹೇಂದ್ರ, ಮಂಗಳ, ದಿಲೀಪ, ಶಿವಪ್ಪಗೌಡ, ವೀರಪ್ಪಗೌಡ ಇತ್ಯಾದಿ. ಇನ್ನು ಗುರು ಪರಂಪರೆ ನೋಡಿ, ಶಿವಶಕ್ತಿದೇವರು, ಜ್ಞಾನಶಕ್ತಿ ದೇವರು, ರುದ್ರಶಕ್ತಿ ದೇಶಿಕರು, ಕ್ರಿಯಾಶಕ್ತಿದೇವರು, ರುದ್ರಗಣ ಪಂಡಿತ ಇತ್ಯಾದಿ ಆಗ ಪ್ರಭು ಸಹೋದರರು, ಗುರು ಸಹೋದರರಲ್ಲಿ ಪೂಜ್ಯಭಾವನೆ ಹೊಂದಿ ಗುರುಗಳಿಗೆ ಮಠ ಮಹಂತನ್ನು ಕಟ್ಟಿಕೊಟ್ಟು ದಾನ ದತ್ತಿಗಳನ್ನು ಬಿಟ್ಟರು. ಅಲ್ಲದೆ ಗುರು ವರ್ಗದವರ ನೇತೃತ್ವದಲ್ಲಿ ಅನೇಕ ವಿದ್ಯಾಸಂಸ್ಥೆ ಗಳನ್ನು, ಘಟಿಕಾಸ್ಥಾನಗಳನ್ನು, ಮಠ ಮತ್ತು ದೇವಾಲಯಗಳನ್ನು ತೆರೆದು ಸಮಾಜದ ಪುರೋಭಿವೃದ್ಧಿಗೆ ಶ್ರಮಿಸಿದರು. ಇದೂ ಅಲ್ಲದೆ ದೊರೆ ಮಂಗಳನು ತನ್ನ ಗುರು ಕಲಿಯುಗ ರುದ್ರನೆಂದು ಪ್ರಖ್ಯಾತನಾದ, ರುದ್ರ ಶಕ್ತಿದೇಶಿಕನಿಗೆ ರಾಜ್ಯಾಡಳಿತ ನಡೆಸಲು ಕೆಲವು ಗ್ರಾಮಗಳನ್ನು ಬಿಟ್ಟುಕೊಟ್ಟು ಅವರ ಮೇಲ್ಪಂಕ್ತಿಯನ್ನನುಸರಿಸಿ ರಾಜ್ಯಭಾರ ಮಾಡಿದನೆಂದು ಇತಿಹಾಸವೇ ಸಾರುತ್ತಿದೆ. ಈ ವಿಚಾರ ಇದೇ ಪುಸ್ತಕದಲ್ಲಿ ಬಂದಿದೆ. ಈಗ ಮೂರು ನಾಲ್ಕು ಭೇದವೆಣಿಸಿದ ಐದನೆಯವರು ಯಾರೆಂಬುದನ್ನು ತಾವೇ ಊಹಿಸಿ ಕೊಳ್ಳಿ. ಇನ್ನು ಮುಂದೆ ಈ ನೊಳಂಬ ಸಮಾಜದ ವಿದ್ಯಾವಂತ ನವ ತರುಣ ತರುಣಿಯರೆಲ್ಲಾ ಒಗ್ಗೂಡಿ ಕಟ್ಟು ಕಥೆಯ ಖದೀಮರನ್ನು ಬಗ್ಗು ಬಡಿಯಿರಿ.

ಈಗ ಈ ಹಿಂದೆ ಅಂದರೆ ಕ್ರಿ. ಶ. 1889 ನೇ ಇಸವಿಯಲ್ಲಿ ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಪುರದಕೇರಿ ಶ್ರೀ ಬಸವೇಶ್ವರ ಜಾತ್ರೆಯ ಕಾಲಕ್ಕೆ ನೊಣಬರಿಗೂ ಪಂಚಮ ಸಾಲಿಯವರಿಗೂ ನಡೆದ ಕಲಹ. ಕಡೆಗೆ 1914 ರಲ್ಲಿ ಹಾವೇರಿ ಮುನ್ಸೀಫ್ ಕೋರ್ಟಿನಲ್ಲಿ ದಾಖಲಾಗಿ 1918 ರಲ್ಲಿ ತಿಪಟೂರು ಶಿಡ್ಲೆಹಳ್ಳಿ ಶ್ರೀ ಸ್ವಾಮಿಗಳವರು ಈ ವ್ಯಾಜ್ಯವನ್ನು ಗೆದ್ದು ಈ ನೊಳಂಬ ವೀರಶೈವರ ಗುರುತ್ವ ಸ್ಥಿರೀಕರವಾದ ಮೇಲೆ ಶ್ರೀ ಸ್ವಾಮೀಜಿ ಯವರು ಹೇಗಾದರೂ ಮಾಡಿ ಮೂರು ನಾಲ್ಕು ಎಂಬ ಭೇದವಾಗಿರುವ ತಮ್ಮ ನೊಳಂಬ ಶಿಷ್ಯರನ್ನು ಒಗ್ಗೂಡಿಸಬೇಕೆಂದು ಮಾಚೀನಹಳ್ಳಿಯಲ್ಲಿ ಸಮಾಜದ ಒಂದು ಬೃಹತ್ ಸಭೆ ಕರೆದರು. ಅಲ್ಲಿಗೆ ನಾಡಿನಾದ್ಯಂತವಿರುವ ನೊಳಂಬ ವೀರಶೈವರೆಲ್ಲಾ ಬಂದು ಸೇರಿದರು. ಆಗ ಈ ಹಿಂದೆ ಮೂರು

ನಾಲ್ಕು ಎಂದು ಕಥೆ ಕಟ್ಟಿ ಭೇದ ಕಲ್ಪಿಸಿದ ಐದನೆಯವರು ಸಹಿಸಲಾರದೆ ನಮ್ಮವನೇ ಆದ ಒಬ್ಬ ಕಟ್ಟೆಗೌಡರ ಕಿವಿ ಊದಿದರು. ಆಗ ಬೃಹತ್ ಸಭೆಯ ಮಧ್ಯೆ ಆ ಗೌಡರು ಸ್ವಾಮೀಜಿಯವರನ್ನು ಕುರಿತು ಬುದ್ಧಿ ಮೂರು ಹೆಚ್ಚೊ, ನಾಲ್ಕು ಹೆಚ್ಚೊ ಎಂದರು, ಆಗ ಗುರುಗಳು ಗೌಡರೇ ಯಾವುದೂ ಹೆಚ್ಚಲ್ಲ, ಯಾವುದೂ ಕಡಿಮೆಯಲ್ಲ ಇದೆಲ್ಲಾ ಭ್ರಮೆ ಸುಮ್ಮನೆ ಕುಳಿತು ಕೊಳ್ಳಿ ಎಂದಾಗ, ಅದಾಗದು ಬುದ್ಧಿ ಇದು ಈಗ ತೀರ್ಮಾನವಾಗಲೇಬೇಕು ಎಂದರು, ಆಗ ಗುರುಗಳು ಈ ಪ್ರಶ್ನೆ ಈ ಸಭೆಯಲ್ಲಿ ಯಾರ ಪಿತೂರಿಯಿಂದ ಹೇಗೆ ಹುಟ್ಟಿತೆಂಬುದನ್ನು ಒಳಗೆ ನಿರ್ಧರಿಸಿ ಗೌಡರ ಮೂರರ ತಿಗದಲ್ಲೇ ನಾಲ್ಕು ಹುಟ್ಟಿದ್ದು, ನಾಲ್ಕು ಹುಟ್ಟಿ ದೊಡ್ಡದಾದ ನಂತರ ಅದರ ತಿಗದಲ್ಲೇ ಐದು ಹುಟ್ಟಿತು ಆ ಐದರ ತಿಟವಟವೇ ಇದೆಲ್ಲಾ ಎಂದಾಗ ಇಡೀ ಸಭೆಯೇ ಚಕಿತಗೊಂಡು, ಹರಹರಾ ಮಹಾದೇವ ಎಂದು ಜಯಕಾರ ಹಾಕುತ್ತಾ ಗುರು-ಗಳಿಗೆ ವಂದಿಸಿ ಮೌನ ತಾಳಿತು.

ಊಟೋಪಚಾರದಂತೆಯೇ ಹೆಣ್ಣು ಕೊಟ್ಟು ತರುವುದನ್ನು ಮಾಡ-ಬೇಕು. ಈಗೆಲ್ಲಾ ತಿಳುವಳಿಕೆ ಮೂಡಿದೆ ಅಲ್ಲಲ್ಲೆ ಈ ಕಾರ್ಯಗಳು ನಡೆಯು ತ್ತಿವೆ, ಇನ್ನು ಈ ಕಾರ್ಯಗಳು ಹೆಚ್ಚೆಚ್ಚಿಗೆ ನಡೆದು ಎಲ್ಲಾ ಒಂದಾಗಿ ಬಾಳಿದರೆ ಈ ಲೇಖಕನ ಶ್ರಮ ಸಾರ್ಥಕವಾಗುತ್ತದೆ. ಒಬ್ಬ ಒಂದೆರಡು ಕಡ್ಡಿಗಳನ್ನು ಹಿಡಿದು ಕ್ಷಣಾರ್ಧದಲ್ಲಿ ತುಂಡರಿಸಬಹುದು, ಹಾಗೆಯೇ ಒಗ್ಗಟ್ಟಿನಲ್ಲಿ ಬಿಗಿ-ಪಟ್ಟು, ಒಗ್ಗೂಡಿದರೆ ಒಗ್ಗಟ್ಟು – ಒಗ್ಗೂಡದಿದ್ದರೆ ಮುಗ್ಗಟ್ಟು, ಎಡ-ಮುರಿ ಕಟ್ಟು.

ಇನ್ನು ಕೊನೆಯದಾಗಿ ಮೊಟ್ಟಮೊದಲು ಲೋಕಕ್ಕೆಲ್ಲಾ ಒಬ್ಬ ಯಜಮಾನ, ಒಡೆಯ, ಪ್ರಭು ಇದ್ದಾನೆ ಎಂದು ತಿಳಿದವರು ಸೃಷ್ಟಿಕರ್ತ ಬ್ರಹ್ಮಪಾಲನ ಕರ್ತೃ ವಿಷ್ಣು ಇವರೀರ್ವರೂ ನಾಹೆಚ್ಚು ತಾಹೆಚ್ಚು ಎಂದು ಯುದ್ಧಕ್ಕೆ ನಿಂತಾಗ ಪ್ರಪಂಚ ಅಲ್ಲೋಲ ಕಲ್ಲೋಲವಾಯಿತು. ಆಗ ಅವರೀ-ರ್ವರ ಮಧ್ಯೆ ಪಾತಾಳದಿಂದ ಆಕಾಶದವರೆಗೆ ಒಂದು ಬೃಹತ್ ಕಂಬವು ಉದಿಸಿತು. ಆ ಕಂಬದಿಂದ ನಿರಂಜನ, ನಿರ್ಲೇಪ, ನಿರ್ದ್ವಂದ್ವ, ನಿರಾಧಾರ ವಸ್ತು ಸಾಕ್ಷಾತ್ಕರಿಸಿ ಅವರಿಬ್ಬರ ಯುದ್ಧ ನಿಲುಗಡೆಗೆ ಕಾರಣವಾಯ್ತು. ಆಗ ವಿಷ್ಣು–ಬ್ರಹ್ಮರೀರ್ವರೂ ಆ ಕಂಬವನ್ನೇ ಹೆಗ್ಗುರುತಾಗಿ ಮಾಡಿಕೊಂಡು